
ಜನಪದ ವಿಚಾರ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧ ಜನವರಿ-೨೦೦೧ ಸಂಚಿಕೆ-೧



ಹುತಾತ್ಮನ ಹುತಾತ್ಮತೆಗೆ ಅಂತ್ಯ ಎಂತು?

ಜನಪದ ವಿಚಾರದಲ್ಲಿ

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜೆಸ್ಟ್

ಜನವರಿ–೨೦೦೬
ಸಂಪುಟ–೬
ಸಂಚಿಕೆ–೬

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/–
ಬಿಡಿ ಸಂಚಿಕೆ : ರೂ ೧೦/–

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧ ೪೩೧
ಮಂಡ್ಯ ಜಿಲ್ಲೆ

(08236)298754
e-mail-janapada@yahoo.com
www.janapada.org

ಮೋಹನದಾಸ ಕರಮಚಂದ ಗಾಂಧಿ

ಇಂದ್ರಿಯಂಗಳ ಜಯಿಸಿ
ಚಿತ್ತಶುದ್ಧಿಯ ಬಯಸಿ
ಲೋಭಮಮಂ ತ್ಯಜಿಸಿ ರೋಷವ ವರ್ಜಿಸಿ।
ಸರ್ವಸಖ್ಯವ ಭಜಿಸಿ ತೃಪ್ತತೆಯನಭ್ಯಸಿಸಿ
ಸತ್ಯಪಾಲನೆಯೊಂದ ಮನದೊಳಿರಿಸಿ
ಕಾಯ ಕಷ್ಟವ ಸಹಿಸಿ ವೈರಿಗಣಮಂ ಕ್ಷಮಿಸಿ
ಸರ್ವಸಮತೆಯ ಗಳಿಸಿ ಶಮವನರಸಿ।
ಸ್ವಾತ್ಮಶಿಕ್ಷಣಮೇ ಸ್ವರಾಜ್ಯಮೆನ್ನುತ ವಚಿಸಿ
ದೇಶಸೇವೆಯನೀಶಸೇವೆಯೆನಿಸಿ॥
ಸಾಧು ವೃತ್ತಿಯ ಪಥವ
ತನ್ನ ಬಾಳಿನೊಳೆ ತೋರಿ।
ಪಾಶವೀ ಬಲದ ದೌರ್ಬಲ್ಯಮಂ ವಿಶದಬಡಿಸಿ।
ಪಾಶ್ಚಾತ್ಯ ಜನಕಮಧ್ಯಾತ್ಮನೀತಿಯನು ಪೇಳ್ದಾ।
ದೈವಸಂಪನ್ಮಾರ್ಗದರ್ಶಕಂ ಗಾಂಧಿಯಲ್ತೆ॥

–ಡಿ.ವಿ.ಜಿ.

ವಿಚಾರ ದೀಪ್ತಿ

ಬುಡಕಟ್ಟು ಅಭಿವೃದ್ಧಿ ಎಂಬುದು ಕೇವಲ ಏಕಮುಖವಾದುದಲ್ಲ. ಕೇವಲ ಅರ್ಥಸ್ವರೂಪಿಯಲ್ಲ. ಅದು ಬಹುಮುಖವಾದುದು. ಇಲ್ಲಿ ಹಣಕ್ಕಿಂತ ಪ್ರೀತಿ ಮುಖ್ಯ. ಬುಡಕಟ್ಟುಗಳ ಅಭಿವೃದ್ಧಿ ಎರಡು ಮುಖ್ಯ ಅಂಶಗಳ ಕಡೆಗೆ ಕೇಂದ್ರೀಕೃತವಾಗಬೇಕು. ಒಂದನೆಯದು ಭೂಮಿ ಸಮಸ್ಯೆ, ಎರಡನೆಯದು ಅರಣ್ಯದಲ್ಲಿನ ವಾಸ್ತವ್ಯದ ಸಮಸ್ಯೆ. ಸಾವಿರಾರು ವರ್ಷಗಳಿಂದ ಯಾವುದೇ ಖಾತೆ, ಕಂದಾಯ, ಪಟ್ಟಾ, ಪಹಣಿಯ ಗೊಂದಲ ಗೋಜು ಇಲ್ಲದೆ ನಿಸರ್ಗ ಸಹಜವಾಗಿ, ಸ್ವಚ್ಛಂದವಾಗಿ ಇಡೀ ಭೂಮಿ ನಮ್ಮದು ಎಂದು ಕೃಷಿಯನ್ನೋ, ಕುಮರಿ ಬೇಸಾಯವನ್ನೋ ಮಾಡಿಕೊಂಡು ಇದ್ದ ಬುಡಕಟ್ಟು ಸಮುದಾಯಗಳನ್ನು ಆಧುನಿಕ ವ್ಯವಸ್ಥೆ ತ್ರಿಶಂಕುಗಳನ್ನಾಗಿ ಮಾಡಿಬಿಟ್ಟಿತು. ರಾಜ ಪ್ರಭುಗಳ ಆಳ್ವಿಕೆಯಲ್ಲಿ ಹಾಗೂ ಬ್ರಿಟಿಷ್ ವಸಹಾತುಶಾಹಿ ಸಂದರ್ಭದಲ್ಲಿ ಇಡೀ ಭೂಮಿಯನ್ನು ಬಹುಸಂಖ್ಯಾತರ ಮತ್ತು ಮೇಲ್ವರ್ಗದ ಜನರ ಆಸ್ತಿಯನ್ನಾಗಿ ಪರಿವರ್ತಿಸಲಾಯಿತು. ಅರಣ್ಯದ ಇಡೀ ಕೃಷಿಯೋಗ್ಯ ಭೂಮಿ ಬ್ರಿಟೀಷರ ಕಾಲದಲ್ಲಿ ಸಾಂಬಾರು ಪದಾರ್ಥಗಳನ್ನು ಮತ್ತು ಕಾಫೀ ಇತ್ಯಾದಿ ವಾಣಿಜ್ಯ ಬೆಳೆಗಳನ್ನು ಬೆಳೆಯುವ ತೋಟಗಳಾಗಿ ಪರಿವರ್ತಿತವಾದದ್ದಲ್ಲದೆ, ಅವುಗಳ ಮಾಲೀಕತ್ವ, ಉಳ್ಳವರ ಹೆಸರಿಗೆ ಪರಿವರ್ತಿತವಾಯಿತು. ಅದುವರೆಗೆ ಭೂಮಿ ತಮ್ಮದು ಎಂಬ ಬುಡಕಟ್ಟುಗಳ ವಿಶ್ವಾಸ ಕುಂದಿಹೋಯಿತು. ಅವರೆಲ್ಲಾ ಭೂಮಾಲೀಕರ ಕೈಕೆಳಗಿನ ಕೂಲಿಕಾರರಾಗಿ ಅಥವಾ ಅವರ ಜೀತದಾಳುಗಳಾಗಿ ಪರಿವರ್ತಿತವಾದರು. ಇದಕ್ಕಿಂತ ದುರಂತ ಇನ್ನೊಂದಿಲ್ಲ.

ಸರ್ಕಾರ ಅಥವಾ ಅರಣ್ಯ ಇಲಾಖೆ ಬರುಬರುತ್ತಾ ಅಭಯಾರಣ್ಯಗಳ, ಹೊಸ ಪ್ಲ್ಯಾಂಟೇಶನ್‌ಗಳ, ವನ್ಯಪ್ರಾಣಿ ಸಂರಕ್ಷಣೆ, ಪ್ರವಾಸೋದ್ಯಮ ಅಭಿವೃದ್ಧಿ, ಹೊಸ ಅಣೆಕಟ್ಟು ನಿರ್ಮಾಣದ ನೆಪದಲ್ಲಿ ಬುಡಕಟ್ಟುಗಳನ್ನು ಸಂಪೂರ್ಣವಾಗಿ ಅತಂತ್ರರನ್ನಾಗಿಸಿದರು. ವಾಸ್ತವದಲ್ಲಿ ಗಿಡಮರಗಳ ಬಗ್ಗೆ, ಪ್ರಾಣಿಪಕ್ಷಿಗಳ ಬಗ್ಗೆ, ನಿಸರ್ಗದ ಜೀವಜಾಲದ ಬಗ್ಗೆ ಅಪಾರ ಪ್ರೀತಿ ಇಟ್ಟುಕೊಂಡುಬಂದ ಇವರನ್ನು ಅವುಗಳ ಶತ್ರುಗಳು ಎಂಬಂತೆ ಬಿಂಬಿಸಿದುದು ವಿಪರ್ಯಾಸ. ನಾಗರಹೊಳೆ, ಕುದುರೆಮುಖ, ಮೆಘಾನೆ, ಕಾಳೀ ಕಣಿವೆ, ಬಿಣಗಾ ಬೀಚು ಇವುಗಳೆಲ್ಲಾ ಮೇಲಿನ ದುರಂತಕ್ಕೆ ಸಾಕ್ಷಿಗಳು.

ಬುಡಕಟ್ಟು ಸಮುದಾಯಗಳಿಗೆ ಈಗ ಹಣಕ್ಕಿಂತ ಹೆಚ್ಚಾಗಿ ಭದ್ರತೆ ಬೇಕಾಗಿದೆ. ಅಪಮಾನವಿಲ್ಲದಂತೆ ಬದುಕುವ ಮಾನವೀಯ ವಾತಾವರಣ ಬೇಕಾಗಿದೆ. ಅವರ ಭೂಮಿ ಮತ್ತು ಅವರ ಅರಣ್ಯವನ್ನು ಅವರಿಗೆ ಮರಳಿ ನೀಡಿದರೆ ಸಾಕು. ಅವರ ಅಭಿವೃದ್ಧಿ ತಾನಾಗಿಯೇ ಆಗುತ್ತದೆ. ಅರಣ್ಯವೂ ಉಳಿಯುತ್ತದೆ.

–ಹಿ.ಚಿ.ಬೋರಲಿಂಗಯ್ಯ

ಹುತಾತ್ಮನ ಹುತಾತ್ಮತೆಗೆ ಅಂತ್ಯ ಎಂತು?

-ಸುರೇಂದ್ರ ಕೌಲಗಿ

ಜನೆವರಿ ಮೂವತ್ತು ಪ್ರತೀವರ್ಷವೂ ಬರುವ ದಿನ. ಆದರೆ ಅದು ಮನುಕುಲಕ್ಕೆ ಸಾಮಾನ್ಯವಾದ, ಭಾರತಕ್ಕೆ ವಿಶೇಷ ಮಹತ್ವದ ದಿನ. ಆ ದಿನ "ಭೂಮಿಯ ಮೇಲೆ ರಕ್ತ ಮಾಂಸ ತುಂಬಿದ ಸತ್ಯಾಗ್ರಹಿಯೊಬ್ಬ ನಡೆದಾಡಿದ್ದ ಎಂದು ಮುಂದಿನ ಪೀಳಿಗೆ ನಂಬಲಸಾಧ್ಯವಾದ ವ್ಯಕ್ತಿ ನಿಜವಾಗಿಯೂ ಜನ್ಮ ತಾಳಿದ್ದಂತಹವನನ್ನು ಸತ್ಯ ಮತ್ತು ಅಹಿಂಸೆಯನ್ನು ಬೋಧಿಸಿಕ್ಕಾಗಿ ಗುಂಡಿಕ್ಕಿ ನಾವು ಅವನನ್ನು ಹುತಾತ್ಮನನ್ನಾಗಿ ಮಾಡಿದ ದಿನ". ಆದ್ದರಿಂದ ಜನವರಿ ಮೂವತ್ತು ಬಂದಾಗ ಭಾರತೀಯರು ನಾಚಿಕೆ ಮತ್ತು ಸಂಕೋಚಗಳಿಂದ ತಲೆ ತಗ್ಗಿಸಬೇಕೆ ಅಥವಾ ತಮ್ಮ ಆಚರಣೆಯನ್ನು ತೀವ್ರ ವಿಮರ್ಶೆಗೆ ಗುರಿಪಡಿಸಬೇಕೆ ಎಂಬ ಪ್ರಶ್ನೆ ಏಳುತ್ತದೆ. ಇವೆರಡರಲ್ಲಿ ನಾವು ಯಾವುದನ್ನು ಮಾಡಿದರೂ ಸರಿಯೆ. ಆದರೆ ಯಾವುದೊಂದನ್ನೂ ಮಾಡದಿದ್ದರೆ ಈಗಾಗಲೇ ಹುತಾತ್ಮನಾಗಿರುವ ವ್ಯಕ್ತಿಯನ್ನು ಅವನು ಬೋಧಿಸಿದ್ದ ಸಿದ್ಧಾಂತಗಳ ವಿರುದ್ಧ ಆಚರಣೆಯನ್ನು ದಿನದಿನವೂ ಮಾಡುತ್ತ ಪುನಃ ಪುನಃ ಅವನನ್ನು ಹುತಾತ್ಮತೆಯತ್ತ ತೆಗೆದುಕೊಂಡು ಹೋಗುವ ಕೆಲಸವನ್ನು ನಾವು ಮಾಡಿದಂತಾಗುತ್ತದೆ. ಆತ್ಮ ಅಮರ, ಶಾಶ್ವತ, ಸರ್ವಾಂತರ್ಯಾಮಿ ಎಂದು ನಾವು ತಿಳಿದಿದ್ದರೆ ಗಾಂಧೀಯೆಂಬ ಆ ವ್ಯಕ್ತಿಯ ಆತ್ಮಕ್ಕೆ ಏನೂ ಆಗದು ಬದಲಿಗೆ ನಮ್ಮ ಆತ್ಮವೇ ಕ್ಲೇಷಕ್ಕೊಳಗಾಗುವುದು.

ಗಾಂಧೀ ಸ್ವತಃ ತಮ್ಮ ಆತ್ಮಚರಿತ್ರೆಯ ಮುನ್ನುಡಿಯ ಕೊನೆಯ ಮಾತಾಗಿ ಹೀಗೆ ಬರೆದಿದ್ದಾರೆ, "ನನ್ನಂಥವರು ನೂರಾರು ಜನ ಸಾಯಲಿ. ಆದರೆ ಸತ್ಯ ಮಾತ್ರ ಉಳಿಯಲಿ". ಇನ್ನೊಂದು ಸಂದರ್ಭದಲ್ಲಿ ಪ್ರಪಂಚಕ್ಕೆ ನಿಮ್ಮ ಸಂದೇಶವೇನೆಂದು ಕೇಳಿದಾಗ "ನನ್ನ ಕೆಲಸವೇ ಆ ಸಂದೇಶ" ಎಂದು ಹೇಳಿದರು. ಅಷ್ಟರ ಮಟ್ಟಿಗೆ ಗಾಂಧಿಗೆ ತಮ್ಮ ಕೆಲಸದ ಬಗ್ಗೆ, ಕೆಲಸದ ಹಿಂದೆ ಇದ್ದ ಗುರಿಗಳ ಬಗ್ಗೆ ಆತ್ಮವಿಶ್ವಾಸವಿತ್ತು. ಆದ್ದರಿಂದಲೇ ಗಾಂಧೀ ಎಂದರೆ ಒಬ್ಬ ವ್ಯಕ್ತಿಯಲ್ಲ. ಅದೊಂದು ವಿಶಿಷ್ಟ ಜೀವನ ಶೈಲಿ. ಪ್ರಚಲಿತ ಪರಿಸ್ಥಿತಿಯನ್ನು ಎದುರಿಸಿ ನಡೆಸಬೇಕಾದ ಜೀವನಶೈಲಿ ಎಂದೇ ಮಾನ್ಯತೆ ಪಡೆದಿದೆ. ಯಾವುದನ್ನು ನಾವು ಆಧುನಿಕಯುಗ, ಜೆಟ್‌ಯುಗ, ಅಣುಯುಗ ಎಂದು ಕರೆಯುತ್ತಾ ವಿಶ್ವೀಕರಣವನ್ನು ಒಪ್ಪಿಕೊಂಡಿರುವ ಇಂದಿನ ಪರಿಸ್ಥಿತಿಯಲ್ಲಿ ಎಷ್ಟು ಜನ "ಗಾಂಧೀ" ಎಂಬ ವಿಶಿಷ್ಟ ಜೀವನ ಶೈಲಿಯನ್ನು ನಡೆಸಲು ಸಿದ್ಧರಿದ್ದಾರೆ? ಅದನ್ನು ಮಾನಸಿಕವಾಗಿ ಒಪ್ಪಿಕೊಳ್ಳಲು ಸಿದ್ಧರಿದ್ದಾರೆ? ಈ ಪ್ರಶ್ನೆಗಳಿಗೆ ಸಿಗುವ ಉತ್ತರ

ನಿರಾಶಾದಾಯಕವಾಗಿದೆ. ಜನ ಸಾಮಾನ್ಯರಿಂದ ಪ್ರಾರಂಭಿಸಿ ಸರ್ಕಾರದವರೆಗೆ ಯಾರೂ ಗಾಂಧೀಶೈಲಿಯನ್ನು, ಗಾಂಧೀ ವಿಚಾರವನ್ನು ಒಪ್ಪಲು ಸಿದ್ಧರಿಲ್ಲ. ಒಂದು ಕಾಲಕ್ಕೆ ಮಹಾತ್ಮಾಗಾಂಧೀ ಅಸ್ಪ್ರಶ್ಯತೆಯ ವಿರುದ್ಧ ಹೋರಾಡಿದ್ದರು. ಈಗ ಅವರ ವಿಚಾರವೇ ಅಸ್ಪ್ರಶ್ಯತೆಗೆ ಒಳಗಾಗಿದೆ! ಇಂದು ಇಷ್ಟೆಲ್ಲಾ ಸಂವಿಧಾನಾತ್ಮಕ ಸಾಮಾಜಿಕ ಸುಧಾರಣೆಗಳ ಒತ್ತಡಗಳ ನಂತರವೂ ದಲಿತರು ಹೇಗೆ ದಹಿಸಲ್ಪಡುತ್ತಿದ್ದಾರೋ, ಹಾಗೆಯೇ ಭಾರತ ದೇಶದ ಜನತೆ ಗಾಂಧಿಯನ್ನು ದಿನದಿನವೂ ದಹಿಸುತ್ತಿದ್ದಾರೆ. ಆದ್ದರಿಂದ ನಮ್ಮ ಮುಂದೆ ಇರುವ ಪ್ರಶ್ನೆ ದಲಿತರ ದಹನಕ್ಕೆ ಕೊನೆ ಎಂತು? ಹಾಗೆಯೇ ಮಹಾತ್ಮನ ಹುತಾತ್ಮತೆಗೆ ಕೊನೆ ಎಂತು? ೧೯೪೮ ಜನವರಿ ಮೂವತ್ತರಂದು ಗಾಂಧಿಯ ಹತ್ಯೆ ಆಗುವ ಮೊದಲು ಅವರು ದಕ್ಷಿಣ ಆಫ್ರಿಕಾದಲ್ಲಿ ರೈಲಿನಿಂದ ಹೊರದಬ್ಬಲ್ಪಟ್ಟಾಗ, ಪಠಾಣನೊಬ್ಬನಿಂದ ಹೊಡೆಯಲ್ಪಟ್ಟಾಗ, ದಿಲ್ಲಿಯಲ್ಲಿ ಪ್ರಾರ್ಥನಾ ಸಭೆ ನಡೆಯುತ್ತಿದ್ದಾಗ ಮದನ್‌ಲಾಲ್ ಎಂಬುವವನಿಂದ ಬಾಂಬ್ ಎಸೆಯಲ್ಪಟ್ಟಾಗ ಮತ್ತು ಇನ್ನೂ ಹಲವಾರು ಬಾರಿ ಶಾರೀರಿಕ ಕಿರುಕುಳಕ್ಕೆ ಒಳಪಡಿಸಲ್ಪಟ್ಟಿದ್ದಾಗ ಗಾಂಧೀ ಹುತಾತ್ಮತೆಯತ್ತ ಒಂದೊಂದು ಮೆಟ್ಟಿಲನ್ನು ಹತ್ತುತ್ತಾ ಬಂದಿದ್ದರು. ಕೊನೆಗೆ ಜನವರಿ ಮೂವತ್ತರಂದು ಹುತಾತ್ಮತೆಯ ಕೊನೆ ಮೆಟ್ಟಿಲನ್ನು ಏರಿ ನಿಂತರು. ಇಲ್ಲ, ಇಲ್ಲ. ಇನ್ನೂ ಗಾಂಧೀಯವರ ಹುತಾತ್ಮತೆಯ ಯಾತ್ರೆ ಮುಗಿದಿಲ್ಲ.

ಗಾಂಧೀ ತಮ್ಮ ೭೯ ವರ್ಷಗಳಷ್ಟು ಧೀರ್ಘಕಾಲದ ಸಮಾಜ ಸೇವೆಯ ಮಂಥನದಿಂದ ನಮ್ಮ ವಿಶ್ವ ಸಮಾಜ ಏಳು ಪ್ರಕಾರದ ಪಾಪಕರ್ಮಗಳಲ್ಲಿ ತೊಡಗಿದೆ ಎಂದು ಘೋಷಿಸಿದರು. ಆ ಏಳು ಪಾತಕಗಳು ಇಂತಿವೆ:

೧) ತತ್ವರಹಿತ ರಾಜಕಾರಣ ೨) ನೀತಿ ರಹಿತ ವಾಣಿಜ್ಯ ೩) ಶ್ರಮರಹಿತ ಸಂಪತ್ತು ೪) ಆತ್ಮಸಾಕ್ಷಿರಹಿತ ಭೋಗ ೫) ಶೀಲ ರಹಿತ ಜ್ಞಾನ ೬) ಮಾನವೀಯತಾ ರಹಿತ ವಿಜ್ಞಾನ ೭) ತ್ಯಾಗರಹಿತ ಪೂಜೆ.

ಗಾಂಧೀಯವರೇನೋ ಒಂದಲ್ಲ ಏಳು ಸಾಮಾಜಿಕ ಪಾಪಗಳನ್ನು ಗುರುತಿಸಿದರು. ಸಾಮಾನ್ಯತಃ ಎಲ್ಲರೂ ಈ ಪಾಪಗಳಿವೆಯೆಂದು ಒಪ್ಪಿಕೊಂಡಿದ್ದಾರೆ. ಐನ್‌ಸ್ಟೈನ್‌ನಂಥ ಹಿರಿಯ ವಿಜ್ಞಾನಿಯಿಂದ ಪ್ರಾರಂಭಿಸಿ ನಮ್ಮ ಇಂದಿನ ಲೋಕಸಭಾಧ್ಯಕ್ಷ ಸೋಮನಾಥ್ ಚಟರ್ಜಿಯವರಿಗೆ, ಹಿರಿಯ ಶಿಕ್ಷಣ ತಜ್ಞ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ನವರಿಂದ ಪ್ರಾರಂಭಿಸಿ, ಕಾಲೇಜಿನ ಒಬ್ಬ ಪ್ರಾಂಶುಪಾಲನ ವರೆಗೆ, ಇನ್‌ಫೋಸಿಸ್‌ನ ನಾರಾಯಣಮೂರ್ತಿಯಿಂದ ಚಮ್ಮಾರನವರೆಗೆ ಆಯಾ ಕ್ಷೇತ್ರದ ಹಿರಿಯ ವ್ಯಕ್ತಿಯಿಂದ ಸಾಮಾನ್ಯ ವ್ಯಕ್ತಿಯವರೆಗೆ ಗಾಂಧೀ ಎತ್ತಿ ತೋರಿಸಿರುವ ಪಾಪವನ್ನು ಒಪ್ಪಿಕೊಂಡಿದ್ದಾರೆ. ಆದರೆ ಈ ಪಾಪಗಳಿಂದ ವಿಮುಕ್ತಿಯ ಮಾರ್ಗವನ್ನು ತುಳಿಯಲು ಮಾತ್ರ ಯಾರೂ ಸಿದ್ಧರಿಲ್ಲ. ಈ ವಿಷಯದಲ್ಲಿ ಎಲ್ಲರೂ ಉತ್ತರಕುಮಾರರೆ! ಆದರೂ ಸಹ ನಿರಾಶರಾಗುವಂತಿಲ್ಲ. ಇದಕ್ಕೆ ಒಂದೇ ಒಂದು

ದಾರಿ, ಅದು ಎಷ್ಟೇ ಕಷ್ಟವಾಗಿರಲಿ ಆ ದಾರಿಯಲ್ಲಿ ನಾವು ನಡೆಯಲು ಪ್ರಯತ್ನಿಸಬೇಕು. ಇಂಥ ಸಂಕಲ್ಪದ ಬಗ್ಗೆ ಸ್ವತಃ ಗಾಂಧೀಜಿಯವರ ಈ ಮಾತೇ ನಮಗೆ ತಾರಕ ಮಂತ್ರವಾಗಬಹುದು, "ಜಗತ್ತು ನಿನ್ನನ್ನು ತನ್ನ ಕೆಂಗಣ್ಣಿನಿಂದ ದುರದುರನೆ ನೋಡಿದರೂ ಸರಿ. ಅದರ ದೃಷ್ಟಿಗೆ ದೃಷ್ಟಿಕೊಟ್ಟು ನಿಲ್ಲಬೇಕಾಗುತ್ತದೆ. ಭೀತಿ ಬೇಡ. ನಿನ್ನ ಹೃದಯದಲ್ಲಿ ನೆಲಸಿ ಹೀಗೆಂದು ಹೇಳುತ್ತಿರುವ ಆ ಅಣುರೂಪಿಯಲ್ಲಿ ನಿನಗೆ ಶ್ರದ್ಧೆಯಿರಲಿ. ಯಾವುದಕ್ಕಾಗಿ ನೀನು ಬದುಕಿದೆಯೋ ಯಾವುದಕ್ಕಾಗಿ ನೀನು ಮಡಿಯಬೇಕೋ ಅದಕ್ಕಾಗಿ ಮನೆ, ಮಠ-ಮಡದಿ-ಮಕ್ಕಳು ಸರ್ವಸ್ವವನ್ನೂ ಪರಿತ್ಯಜಿಸು: ಆದರೆ ಅದರ ಸತ್ಯಕ್ಕೆ ಸಾಕ್ಷಿಯಾಗಿ ಬಾಳು."

೧೯೪೭ರಲ್ಲಿ ಗಾಂಧೀ ಹೇಳಿದ ಈ ಮಾತನ್ನು ನಾವು ಇಂದು ಅನುಸರಿಸಿದಲ್ಲಿ ಹುತಾತ್ಮನ ಹುತಾತ್ಮತೆಗೆ ಕೊನೆ ಬರಲು ಸಾಧ್ಯ.

* * *

ಪುಸ್ತಕ ವಿಚಾರ

ಪುಸ್ತಕದ ಹೆಸರು: "ಗಾಂಧೀಜಿಯ ರೂಪಕಗಳು" ಲೇಖಕರು: ರಾಜಗೋಪಾಲ.ಎಂ. ಪ್ರಕಾಶಕರು: ಕರ್ನಾಟಕ ಸಂಘ, 'ಅನುರಾಗ' ಶ್ರೀರಾಧಾ ಕೃಷ್ಣ ಮಂದಿರ ರಸ್ತೆ, ಪುತ್ತೂರು-೫೭೪ ೨೦೧ ದ.ಕ. ಪುಟಗಳು: ೪೧೬ ಬೆಲೆ: ೨೭೦-೦೦ ಪ್ರಕಟಣೆಯ ವರ್ಷ: ೨೦೦೫

ಚಾಣಾಕ್ಷ ರಾಜಾಜೀ, ಪ್ರತಿಭಾವಂತ ಗೋಖಲೆ, ದಕ್ಷ ಪಟೇಲ್, ಮುತ್ಸದ್ದಿ ನೆಹರು, ದೇಶಭಕ್ತ ತಿಲಕ್, ಧೀಮಂತ ನೌರೋಜಿ, ಕೆಚ್ಚದೆಯ ಬೋಸ್, ವಿಶ್ವಚೇತನದ ಠಾಗೋರ್, ಕಟ್ಟುವ ಮಾಲವೀಯ, ಶಾಂತಿದೂತ ಟಾಲ್‌ಸ್ಟಾಯ್, ಕರ್ಮಯೋಗಿ ಕೃಷ್ಣ, ಮರ್ಯಾದೆಯ ರಾಮ, ತೀಕ್ಷ್ಣಮತಿಯ ರಾನಡೆ, ನಿಷ್ಠೆಯ ಗಫಾರ್ ಖಾನ್. ... ಇವರೆಲ್ಲರ ಗುಣ ವಿಶೇಷಗಳನ್ನು ತಕ್ಕ ಪ್ರಮಾಣದಲ್ಲಿ ಮೇಳೈಸಿಕೊಂಡು ಅದರೊಂದಿಗೆ ತಾನೇ ಸೃಷ್ಟಿಸಿದ ಅದ್ಭುತ ರೂಪಕಗಳಾದ ಸತ್ಯ, ಅಹಿಂಸೆ, ಪ್ರಾರ್ಥನೆ, ಸೇವೆ, ಮತೈಕ್ಯ, ಭಂಗಿ , ನಿರ್ಮಿತಿ ಕಾರ್ಯಕ್ರಮಗಳೊಂದಿಗೆ, ದೇಶಕಟ್ಟುವ ಕೆಲಸದಲ್ಲೇ ಕಳಚಿಹೋದ 'ಗಾಂಧೀ'-ಅನ್ನುವ ಮನುಷ್ಯ ಮಹಾತ್ಮನಾಗುತ್ತಾನೆ.

ಕೋಟಿಗಟ್ಟಲೆ ಜನಸಂಖ್ಯೆಯ ಭಾರತದಲ್ಲಿ ಸಾವಿರಗಟ್ಟಲೆ ಸ್ವಾತಂತ್ರ್ಯ ಹೋರಾಟಗಾರರು, ನೂರಾರು ಮುಖಂಡರುಗಳು ಆದರೆ ದೇಶವನ್ನು ಕಟ್ಟಿದ ತಂದೆ-ಒಬ್ಬರೇ ಒಬ್ಬರು-ಅದು 'ಗಾಂಧೀಜಿ'.

ಮೇಲ್ಕಾಣಿಸಿದ ವಿಷಯ ಪುಸ್ತಕದಲ್ಲಿಯ ಒಂದು ಕಿರು ಭಾಗ.

ಎಡವುತ್ತಿರುವ ಗಣರಾಜ್ಯ

-ಸುರೇಂದ್ರ ಕೌಲಗಿ

"ಸಂವಿಧಾನವು ಎಷ್ಟೇ ಚೆನ್ನಾಗಿರಬಹುದು; ಅದನ್ನು ನಿರ್ವಹಿಸುವವರು ಒಳ್ಳೆಯವರಾಗಿರದಿದ್ದರೆ ಅದು ನಿಶ್ಚಯವಾಗಿಯೂ ಕೆಟ್ಟದಾಗಿಯೇ ಪರಿಣಮಿಸುವುದು. ಹಾಗೆಯೇ ಅದು ಎಷ್ಟೇ ಕೆಟ್ಟದಾಗಿರಬಹುದು ಅದನ್ನು ನಿರ್ವಹಿಸುವವರು ಒಳ್ಳೆಯವರಾಗಿದ್ದರೆ ನಿಶ್ಚಯವಾಗಿಯೂ ಒಳ್ಳೆಯದಾಗಿಯೇ ಪರಿಣಮಿಸುವುದು."

-ಡಾ॥ ಬಿ. ಆರ್. ಅಂಬೇಡ್ಕರ್

ನಾವು ಗಣರಾಜ್ಯವನ್ನು ಸ್ಥಾಪಿಸಿಕೊಂಡಾಗಿನಿಂದ ನಮ್ಮ ದೇಶದ ಸಂವಿಧಾನವನ್ನು ನಿರ್ವಹಿಸಿಕೊಂಡು ಬಂದವರು ಒಳ್ಳೆಯವರೆ ಅಥವಾ ಒಳ್ಳೆಯವರಲ್ಲವೆ ಎಂಬ ವಿಷಯವನ್ನು ವಿಮರ್ಶೆ ಮಾಡುವುದಕ್ಕೆ ಈ ವರ್ಷ ನಾವು ಆಚರಿಸಲಿರುವ ೫೦ನೇ ಗಣರಾಜ್ಯೋತ್ಸವ ಒಂದು ಸೂಕ್ತ ಕಾಲ. ಗಣರಾಜ್ಯದ ಅರ್ಧ ಶತಮಾನವನ್ನು ಮುಗಿಸಿ ಪೂರ್ಣ ಶತಮಾನದತ್ತ ಹೆಜ್ಜೆ ಇಡುವಾಗ ಅದು ಮುಖ್ಯವೂ ಹೌದು. ಏಕೆಂದರೆ ಆಲ್ಡೌಸ್ ಹಕ್ಸಲಿ ಹೇಳುವಂತೆ ಅನುಭವ ಯಾವ ವ್ಯಕ್ತಿಗೆ ಏನು ಆಗುತ್ತದೆ ಎಂಬುವುದಕ್ಕಿಂತ ಅವನು ಏನು ಮಾಡುತ್ತಾನೆ ಎಂಬುದು ಮುಖ್ಯ. ಈ ಕಾರಣದಿಂದ ಗಣರಾಜ್ಯದ ನಮ್ಮ ಅನಭವವನ್ನು ವಿಮರ್ಶಿಸಲು ಪ್ರಾರಂಭಿಸಿದಾಗ ನಮ್ಮ ಮನಸ್ಸೆಲ್ಲೆಲ್ಲೋ ಒಂದು ಆತಂಕ ಮೂಡುತ್ತದೆ. ನಮ್ಮ ಗಣರಾಜ್ಯ ಎಡವುತ್ತಲಿದೆ ಎಂಬ ಅನಿಸಿಕೆ ಮೂಡುತ್ತದೆ. ಗಣರಾಜ್ಯ ಪ್ರೌಢವಾಗುತ್ತಾ ಹೋದಂತೆ ಆ ರಾಜ್ಯದ ಆಧಾರಸ್ತಂಭರಾದ ಮತದಾರರು ನೈತಿಕವಾಗಿ, ರಾಜಕೀಯವಾಗಿ ಹೆಚ್ಚು ಪರಿಪಕ್ವವಾಗುತ್ತಾ ಹೋಗಬೇಕು. ಗಣರಾಜ್ಯ ಒಂದು ವಿಶಿಷ್ಟ ಪ್ರಕಾರದ ರಾಜ್ಯವ್ಯವಸ್ಥೆ. ಈ ರಾಜ್ಯವ್ಯವಸ್ಥೆಯನ್ನು ಜೇಡನ ಬಲೆಗೆ ಹೋಲಿಸಬಹುದು. ಜೇಡ ಎಲ್ಲ ಮೂಲೆಗಳಿಂದಲೂ ತಂತುವನ್ನು ತಂದು ಒಂದು ಕೇಂದ್ರ ಬಿಂದು ರಚಿಸಿಕೊಂಡಿರುತ್ತದೆ. ಹಾಗೆಯೇ ನಮ್ಮೀ ಗಣರಾಜ್ಯ ವ್ಯವಸ್ಥೆ. ಮತದಾರ, ಪ್ರತಿನಿಧಿ, ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಮತ್ತು ಮಾಧ್ಯಮ ಎಂಬೀ ತಂತುಗಳು ಗಟ್ಟಿಯಾಗಿರಬೇಕಾದುದು ಅಗತ್ಯ. ಈ ತಂತುಗಳಲ್ಲಿ ಒಂದು ತಂತುವೇನಾದರೂ ದುರ್ಬಲಗೊಂಡರೆ ಇಡೀ ಗಣರಾಜ್ಯ ವ್ಯವಸ್ಥೆ ದುರ್ಬಲಗೊಳ್ಳುತ್ತದೆ. ಇಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆಯೋ, ಅನಭವಿಸುತ್ತಿದ್ದೇವೆಯೋ ಗೊತ್ತಿಲ್ಲ. ಅಂತೂ ನಮ್ಮ ದೇಶದ ಬಹುದೊಡ್ಡ ಜನಸಂಖ್ಯೆ ತನ್ನ ಚುನಾಯಿತ ಸರ್ಕಾರದಿಂದಲೇ ದಿನೇ ದಿನೇ ಕಷ್ಟಕ್ಕೀಡಾಗುತ್ತಿದೆ. ಸುಸಂಸ್ಕೃತ ಸಮಾಜದ ಮೌಲ್ಯಗಳು ಭೂಗತವಾಗುತ್ತಿವೆ. ಆಡಳಿತ ನಡೆಸುವವರ ಕೈಗಳು ಭ್ರಷ್ಟಾಚಾರ, ಅನಾಚಾರ, ಶೋಷಣೆ ಮುಂತಾದ ಪಾಪಗಳಿಂದ ಮಲಿನಗೊಂಡಿವೆ. "ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಮುಗ್ಧ ಜನತೆಯ ರಕ್ತದಿಂದ ಕೆಂಪಾದಾಗ ಅವು ಅಪವಿತ್ರವಾಗುತ್ತವೆ" ಎಂದು ಗಾಂಧೀಜಿ ಹೇಳಿದ್ದ ಮಾತು ಅನಿವಾರ್ಯವಾಗಿ ನೆನಪಿಗೆ ಬರುತ್ತದೆ.

೫೦ನೇ ಗಣರಾಜ್ಯೋತ್ಸವವನ್ನು ಆಚರಿಸಬೇಕೆಂಬ ವೇಳೆಯಲ್ಲಿ ಅಕಾಲಿಕವಾಗಿ ಮಳೆಯಾಗಿ ಕೈಗೆ ಬಂದ ಬೆಳೆಯೆಲ್ಲಾ ಹಾಳು ಆದಂತೆ ಪ್ರಶ್ನೆ-ಭ್ರಷ್ಟಾಚಾರದ ಕಕ್ಷೆಯಲ್ಲಿ ೧೧ ಸಂಸದರು ಸಿಲುಕಿ ಗಣರಾಜ್ಯೋತ್ಸವದ ಆನಂದೋತ್ಸಾಹಗಳ ಮೇಲೆ ತಣ್ಣೀರೆರಚಿದೆ. ಈ ಘಟನೆ ಕೇವಲ ಜನತಾ ಪ್ರತಿನಿಧಿಗಳಿಗೆ ಸಂಬಂಧಿಸಿದ್ದು ಎಂದು ಭಾವಿಸಿದರೆ ಅದು ತಪ್ಪು. ಈ ಘಟನೆ ನಮ್ಮ ಸಮಸ್ತ ಗಣರಾಜ್ಯ ವ್ಯವಸ್ಥೆಗೆ ಹಿಡಿದ ಕನ್ನಡಿ. ಬೀಜ-ವೃಕ್ಷ ನ್ಯಾಯದಂತೆ ಜಟಿಲ ಸಮಸ್ಯೆ. ಜನರು ಕೆಡದ ಹೊರತು ಕೆಟ್ಟ ಪ್ರತಿನಿಧಿಗಳು ಆಯ್ಕೆಯಾಗಲು ಸಾಧ್ಯವಿಲ್ಲ. ಪ್ರತಿನಿಧಿಗಳು ಕೆಡದ ಹೊರತು ಜನರು ಕೆಡಲು ಸಾಧ್ಯವಿಲ್ಲ. ಈ ಪ್ರತಿನಿಧಿಗಳು ಮತ್ತು ಜನರು ಸೇರಿಯೇ ಗಣರಾಜ್ಯವಾಗುತ್ತದೆ. ಆದ್ದರಿಂದ ಸಂಸದರ ಭ್ರಷ್ಟಾಚಾರದ ವಿಷಯ ಅವರಿಗೆ ಮಾತ್ರ ಸೀಮಿತವಾದುದು ಎಂದು ನಾವು ಭಾವಿಸುವುದಾದರೆ ಗಣರಾಜ್ಯ ಎಡವುತ್ತಿದೆ ಎಂಬುದಕ್ಕೆ ಇದೇ ಸಾಕ್ಷಿ.

ಸಂಸದರ ಈ ಭ್ರಷ್ಟಾಚಾರ ಹಿಮಗಡ್ಡೆಯ ತುದಿಯಷ್ಟೆ. ಅದರ ಬುಡದಲ್ಲಿ ಭ್ರಷ್ಟಾಚಾರದ ದೊಡ್ಡ ಪರಂಪರೆಯೇ ಇದೆ. ಅವೆಲ್ಲಾ ಒಂದಕ್ಕಿಂತ ಒಂದು ದೊಡ್ಡದಾಗಿವೆ. ದೇಶದ ರಾಜಧಾನಿ ದಿಲ್ಲಿಯಲ್ಲಿ ಈಗ ಉರುಳಿಸಲಾಗುತ್ತಿರುವ ಅನಧಿಕೃತ ಕಟ್ಟಡಗಳ ಸಂಖ್ಯೆ ಹದಿನೆಂಟು ಸಾವಿರಕ್ಕೂ ಹೆಚ್ಚಿದೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅನಧಿಕೃತವಾಗಿ ಬಹು ಬೆಲೆಯ ಪ್ರಮುಖ ಸ್ಥಳಗಳಲ್ಲಿ ಕಟ್ಟಡಗಳ ನಿರ್ಮಾಣವಾಗಿರಬೇಕಾದರೆ ಎಷ್ಟು ದೊಡ್ಡ ಪ್ರಮಾಣದ ಭ್ರಷ್ಟಾಚಾರದ ಯಮುನೆ ಅಲ್ಲಿ ಹರಿದಿರಬಹುದೆಂಬುದು ಅವರವರ ಊಹೆಗೆ ಬಿಟ್ಟದ್ದು. ಇಂಥ ಕಥೆ ಪ್ರತಿಯೊಂದು ರಾಜ್ಯದ ರಾಜಧಾನಿಯಲ್ಲಿ "ಅಭಿವೃದ್ಧಿ" ಎಂಬ ಮಾಯಾ ಶಬ್ದದ ಹೆಸರಿನಲ್ಲಿ ನಡೆದಿರುವುದು ಎಂದೂ ಬೆಳಕಿಗೆ ಬರದ ಇತಿಹಾಸದ ಪುಟಗಳಲ್ಲಿ ಸೇರಿಕೊಂಡಿದೆ. ರಾಜಕೀಯ ಭ್ರಷ್ಟಾಚಾರದ ಈ ವ್ಯಥೆ ಕೇವಲ ಪ್ರಜಾಪ್ರತಿನಿಧಿಗಳನ್ನು ಮಾತ್ರ ಸುತ್ತಿಕೊಂಡಿಲ್ಲ. ಅವರನ್ನು ಆಯ್ಕೆ ಮಾಡುವ ಮತದಾರನನ್ನೂ ಸುತ್ತಿಕೊಂಡಿದೆ ಹೆಚ್ಚಿನ ವ್ಯಥೆ. ಮತದಾರ ನಮ್ಮ ದೇಶದ ಪ್ರಜಾತಾಂತ್ರಿಕ ಗಣರಾಜ್ಯದ ಮೂಲ ದ್ರವ್ಯ. ಈಗಿನ ಪರಿಸ್ಥಿತಿ ಹೇಗಿದೆಯೆಂದರೆ ಮತದಾರನೇ ಭ್ರಷ್ಟನಾಗಿದ್ದಾನೆ ತನ್ನ ನೈತಿಕ ಶಕ್ತಿಯನ್ನು ಕಳೆದುಕೊಂಡಿದ್ದಾನೆ. ಆದ್ದರಿಂದ ಗಣರಾಜ್ಯವನ್ನು ನಿರ್ವಹಿಸುವಂಥವರ ಮೇಲೆ ತನ್ನ ನಿಯಂತ್ರಣವನ್ನು ಕಳೆದುಕೊಂಡಿದ್ದಾನೆ. ಅದರ ಫಲವಾಗಿ ದೇಶ ಲಗಾಮು ಕಿತ್ತುಕೊಂಡ ಕುದುರೆಯಂತೆ ಮನಸೋ ಇಚ್ಛೆ ಓಡುತ್ತಿದೆ. ತನಗೇ ಗೊತ್ತಿಲ್ಲದಂತೆ ವಿಶ್ವ ವಾಣಿಜ್ಯ ಸಂಸ್ಥೆ, ವಿಶ್ವ ಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ, ಜಿ-೪, ಜಿ-೮ ಇತ್ಯಾದಿ ಸಾಲಗಳ ಕೂಪದೊಳಗೆ ಬೀಳುತ್ತಿದೆ. ಚೀಣಾ, ಪಾಕಿಸ್ತಾನ ಮುಂತಾದ ದೇಶಗಳ ಭಯದಿಂದ ಶಸ್ತ್ರಾಸ್ತ್ರಗಳ ತಯಾರಿಕಾ ಪೈಪೋಟಿಯಲ್ಲಿ ತನ್ನನ್ನು ತೊಡಗಿಸಿಕೊಂಡು ಸಾಮಾನ್ಯ ಭಾರತೀಯನ ವಾರ್ಷಿಕ ಆದಾಯ ೫ಸಾವಿರ ರೂಪಾಯಿಗಳಷ್ಟೂ ಇಲ್ಲದಂತೆ ಮಾಡಿದೆ. ವಿವಿಧ ಅಂತರಾಷ್ಟ್ರೀಯ ಒಪ್ಪಂದಗಳ ಕಾರಣದಿಂದ ಪದಾರ್ಥಗಳ ಬೆಲೆಗಳು ಬಡವರ ಕೈಗೆಟಕುವಂತಿಲ್ಲವಾಗಿದೆ. ಬಡತನದ ಬೇಗೆಯನ್ನು ತಾಳಲಾರದೆ ಸಾಲದ

ಶೂಲವನ್ನು ಸಹಿಸಲಾರದೆ ಬಡವರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ವಿಶ್ವದಲ್ಲಿ ಕಡುಬಡತನದ ಕಾರಣದಿಂದಾಗಿ ಹಿಂದುಳಿದ ರಾಷ್ಟ್ರವೆಂದು ಹಣೆಪಟ್ಟಿ ಪಡೆದಿರುವ ಭಾರತ ರಕ್ಷಣಾ ವ್ಯವಸ್ಥೆಗಾಗಿಯೇ ತನ್ನ ಬಜೆಟ್ಟಿನಲ್ಲಿ ಶೇಕಡಾ ೮೦ಕ್ಕೂ ಹೆಚ್ಚು ಹಣವನ್ನು ಮೀಸಲಾಗಿಡುತ್ತಿದೆ. ವರ್ಷ ವರ್ಷವೂ ಈ ಪ್ರಮಾಣ ಹೆಚ್ಚಾಗುತ್ತಲೇ ಇದೆ. ನೂರಾ ಹತ್ತು ಕೋಟಿ ಪ್ರಜಾಸಂಖ್ಯೆಯಲ್ಲಿರುವ ಭಾರತದ ಗಣರಾಜ್ಯ ಎಡವುತ್ತಿರುವ ವಿಷಯಗಳಲ್ಲಿ ಇದೊಂದು ಪ್ರಮುಖ ಅಂಶ. ಇದರೊಂದಿಗೆ ಸೇರಿಕೊಂಡಿರುವ ಇನ್ನೆರಡು ಪ್ರಮುಖ ಅಂಶಗಳು:-ಶ್ರೀಮಂತರನ್ನು ಹೆಚ್ಚು ಶ್ರೀಮಂತರನ್ನಾಗಿ ಮಾಡುವ ಮತ್ತು ಹಳ್ಳಿಗಳ ಬೆನ್ನುಮೂಳೆ ಮುರಿದು ನಗರಗಳನ್ನು ಬೆಳೆಸುವ ಹಾಗೂ ಕೃತಕ ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ಭಾರತವನ್ನು ಶಾಶ್ವತವಾಗಿ ಆರ್ಥಿಕ ದಾಸ್ಯಕ್ಕೆ ತಳ್ಳುವ ಅಭಿವೃದ್ಧಿ ನೀತಿ. ಈಗ ತಾನೆ ಹಾಂಕಾಂಗಿನಲ್ಲಿ ಮುಕ್ತಾಯಗೊಂಡ ವಿಶ್ವ ವಾಣಿಜ್ಯ ಸಂಸ್ಥೆಯ ಸದಸ್ಯರಾಷ್ಟ್ರಗಳ ಸಮ್ಮೇಳನದಲ್ಲಿ ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ೧೧೦ ರಾಷ್ಟ್ರಗಳೂ ಶ್ರೀಮಂತ ರಾಷ್ಟ್ರಗಳ ಗಗನ ಕುಸುಮದಂತಿರುವ ಅನುಕಂಪದ ಭರವಸೆಗಳನ್ನು ನಂಬಿ ಮೋಸಹೋಗಿವೆ. ಭಾರತದ ಪ್ರತಿನಿಧಿ ದಿಲ್ಲಿಗೆ ಹಿಂದಿರುಗಿ ಕೂಸು ಹುಟ್ಟುವ ಮೊದಲೇ ಕುಲಾವಿಯ ಮಾತನ್ನು ಹೇಳಿದ್ದಾರೆ.

ಭಾರತದ ಸಂವಿಧಾನ ವಿಶ್ವದಲ್ಲೇ ಅತಿದೊಡ್ಡ ಸಂವಿಧಾನವೆಂಬುದು ಗಿನ್ನಿಸ್ ದಾಖಲೆಗೆ ಮಾತ್ರ ಸರಿ ಎಂದೆನಿಸುತ್ತದೆ. ಇತ್ತೀಚಿಗಿನ ರಾಜಕೀಯ ಬೆಳವಣಿಗೆಯನ್ನು ಗಮನಿಸುತ್ತಾಹೋದರೆ ಮತ್ತು ಆ ಬೆಳವಣಿಗೆಯಿಂದ ಆಗುತ್ತಿರುವ ಪರಿಣಾಮಗಳನ್ನು ಗಮನಿಸುತ್ತಾ ಹೋದರೆ ನಮ್ಮ ಸಂವಿಧಾನ ಬಹುಮುಖ್ಯ ವಿಷಯಗಳ ಬಗ್ಗೆಯೇ ಮೌನದಿಂದಿರುವುದು ಗೊತ್ತಾಗುತ್ತದೆ. ಉದಾಹರಣೆಗೆ ಬಹು ಇತ್ತೀಚಿಗಿನ ಪ್ರಶ್ನೆ-ಭ್ರಷ್ಟಾಚಾರಗಳ ಬೆಳವಣಿಗೆಯನ್ನೇ ನೋಡೋಣ. ಕಳಂಕಿತ ಸದಸ್ಯರನ್ನೇನೋ ಉಚ್ಚಾಟಿಸಲಾಯಿತು, ಆದರೆ ಸಂಸತ್ತಿನ ಆ ತೀರ್ಮಾನವು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲುವ ಸಾಧ್ಯತೆ ಇದೆ. ಇನ್ನೊಂದು ಉದಾಹರಣೆ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದಕ್ಕಾಗಿ ಮೀಸಲಾತಿಯ ಕ್ರಮ. ಮೀಸಲಾತಿ ಎಷ್ಟು ದೂರ, ಎಷ್ಟು ವ್ಯಾಪಕವಾಗಿರಬೇಕೆಂಬ ಬಗ್ಗೆ ಸಂವಿಧಾನ ಮೌನವಾಗಿದೆ. ಈ ವಿಷಯ ಬಹುವಿಧ ಚರ್ಚೆಗೆ ಕಾರಣವಾಗುವ ಮೂಲಕ ಸಮಾಜದಲ್ಲಿ ತುಮುಲವನ್ನುಂಟು ಮಾಡಿದೆ. ಈ ವಿಷಯದಲ್ಲಿ ಸಂವಿಧಾನವು ಸ್ಪಷ್ಟವಾಗಿದ್ದಿದ್ದರೆ ಈಗ ತಿದ್ದುಪಡಿಯಾಗಿರುವ ೧೧೮ನೇ ತಿದ್ದುಪಡಿ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಮೀಸಲಾತಿಯ ಕಕ್ಷೆಯಿಂದ ದೂರವಿಟ್ಟು ಸಾಮಾಜಿಕ ನ್ಯಾಯಕ್ಕೇ ಕುಠಾರಪ್ರಾಯವಾಗುತ್ತಿರಲಿಲ್ಲ.

ಸಂವಿಧಾನ ಇನ್ನೊಂದು ಮುಖ್ಯ ವಿಷಯದಲ್ಲಿ ಎಡವಿದೆ. ದೇಶಕ್ಕೆ ಬಂದ ಸ್ವಾತಂತ್ರ್ಯ ಸ್ವರಾಜ್ಯವಾಗಿ ರೂಪಾಂತರಗೊಂಡು ಮುಂದೆ ಅದು ಸುರಾಜ್ಯವಾಗಿ ಹೊರಹೊಮ್ಮಿ ಅಂತಿಮವಾಗಿ ಗ್ರಾಮಸ್ವರಾಜ್ಯವಾಗಿ ನೆಲೆ ನಿಲ್ಲಬೇಕೆಂಬ ಆಶಯವನ್ನು ಸುಳ್ಳುಮಾಡಿದೆ. ಗಾಂಧೀ-ವಿನೋಬಾರ ಗ್ರಾಮಸ್ವರಾಜ್ಯದ ಕನಸನ್ನು

ನನಸನ್ನಾಗಿ ಮಾಡಲು ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಲಾಗುತ್ತಿದೆ ಮತ್ತು ಅವುಗಳ ಅಭಿವೃದ್ಧಿಗಾಗಿಯೇ ೧,೭೪,೦೦೦ ಕೋಟಿಯ "ಭಾರತ ನಿರ್ಮಾಣ ನಿಗಮ"ವನ್ನು ಸ್ಥಾಪಿಸಲಾಗಿದೆ ಎಂದು ಪ್ರಧಾನಿ ಮನಮೋಹನ ಸಿಂಗ್ ಹೇಳಿದ್ದಾರೆ. ಸಾರ್ವಜನಿಕ ವಲಯದ ಬ್ಯಾಂಕುಗಳು ೬,೭೪೪ ಕೋಟಿ ಹಣವನ್ನು ಕೃಷಿ ಕ್ಷೇತ್ರಕ್ಕೆ ಸಾಲ ಕೊಟ್ಟಿರುವುದಾಗಿ ಹೇಳಿಕೊಂಡಿವೆ. ಇದುವರೆಗಿನ ಹತ್ತು ಪಂಚವಾರ್ಷಿಕ ಯೋಜನೆಗಳಂತೂ ಹಗಲೂ-ರಾತ್ರಿ ಗ್ರಾಮಾಭಿವೃದ್ಧಿಯ ಮಂತ್ರವನ್ನು ಜಪಿಸಿವೆ. ಆ ಯೋಜನೆಗಳ ಮೂಲಕ ಗಂಗಾ ಕಾವೇರಿಯ ಸ್ವರೂಪದಲ್ಲಿ ಹಣದ ಹೊಳೆ ಹರಿಸಿವೆ. ಆದರೆ ಗ್ರಾಮ ಸ್ವರಾಜ್ಯಕ್ಕೆ ಹಣ ಮುಖ್ಯವಲ್ಲ ಮಾನವೀಯ ಮೌಲ್ಯಗಳು ಮುಖ್ಯ ಎಂಬ ಮಾತನ್ನೇ ಹಣದ ಭರಾಟೆಯಲ್ಲಿ ಮರೆಯಲಾಗಿದೆ. ಇದರಿಂದಾಗಿರುವ ಪರಿಣಾಮವೆಂಥದು? ರೈತರ ಮತ್ತು ನಿರುದ್ಯೋಗಿಗಳ ನಿಲ್ಲದ ಆತ್ಮಹತ್ಯೆಗಳು. ಗ್ರಾಮಸ್ಥರ ಸ್ವಾಭಿಮಾನವನ್ನ ಹಾಳುಗೆಡವಿ ಅವರನ್ನು ಹಣಲೋಲುಪರನ್ನಾಗಿ ಮಾಡಿದುದು. ಹಣದ ಆಸೆಯನ್ನು ತೋರಿಸದೆ ಗ್ರಾಮಸ್ಥರು ಏನೂ ಮಾಡುವುದಿಲ್ಲ ಎಂಬಂಥ ಗುಲಾಮತನವನ್ನು ಬೇರೂರಿಸಲು ಇಂದಿನ ಪಂಚಾಯತ್ ರಾಜ್ಯ ಪದ್ಧತಿ ಸಫಲವಾಗಿದೆ. "ಜನರು ತಮ್ಮ ವ್ಯವಹಾರವನ್ನು ತಾವೇ ನಿರ್ವಹಿಸುವುದನ್ನು ತಪ್ಪಿಸುವ ಕಲೆಯೇ ರಾಜಕಾರಣ" ಎಂದು ರಾಜ್ಯಶಾಸ್ತ್ರ ವಿಚಾರ ತಜ್ಞ ಪಾಲ್ ವಲೇರಿ ಹೇಳಿದ ಮಾತು ಪಂಚಾಯತ್ ರಾಜ್ಯದಲ್ಲಿ ಪ್ರತ್ಯಕ್ಷವಾಗಿ ಕಾಣುತ್ತಿದೆ. ರಘುವಂಶ ಕಾವ್ಯದಲ್ಲಿ ಕಾಳಿದಾಸನು ಅಂದು ಹೇಳಿದ್ದ ಮಾತು ಇಂದೂ ನಿಜವಾಗಿದೆ. "ಪ್ರಜೆಗಳ ಶಿಕ್ಷಣ, ರಕ್ಷಣೆ ಎಲ್ಲವನ್ನೂ ರಾಜನೇ ಮಾಡುತ್ತಿದ್ದ. ತಾಯಿ-ತಂದೆಯರು ಕೇವಲ ಜನ್ಮದಾತರಾಗಿದ್ದರು. ಉಳಿದ ಎಲ್ಲ ಅನುಕೂಲಗಳನ್ನೂ ಅವರಿಗಾಗಿ ರಾಜನೇ ಮಾಡುತ್ತಿದ್ದ." ಪ್ರಜೆಗಳಿಗೆ ಜನ್ಮ ಕೊಡುವಂತಹ ಯಂತ್ರ ರಾಜನ ಬಳಿ ಇರಲಿಲ್ಲ. ಇದ್ದಿದ್ದರೆ ಆ ಕೆಲಸವನ್ನು ತಾನೆ ಮಾಡುತ್ತಿದ್ದ! ಇದೇ ಪರಿಸ್ಥಿತಿ ದೇಶದ ತುಂಬೆಲ್ಲಾ ಇಲ್ಲವೆ? ನಮ್ಮ ಗಣರಾಜ್ಯ ಎಡವಿದ್ದು ಇಲ್ಲೇ. ಗ್ರಾಮರಾಜ್ಯದಿಂದ ಮೇಲಕ್ಕೇರುತ್ತ ಗಣರಾಜ್ಯವಾಗಿ ಪಿರಾಮಿಡ್ ಆಕಾರವನ್ನು ತಾಳಬೇಕಿತ್ತು. ಈಗ ನಮ್ಮ ಗಣರಾಜ್ಯ ತಲೆಕೆಳಕಾದ ಗಣರಾಜ್ಯವಾಗಿದೆ. ಆದ್ದರಿಂದ ನಮ್ಮ ಗಣರಾಜ್ಯದ ಆರ್ಥಿಕನೀತಿ, ಶಿಕ್ಷಣನೀತಿ, ವಾಣಿಜ್ಯನೀತಿ, ಉದ್ಯೋಗನೀತಿ, ರಕ್ಷಣಾನೀತಿ ಎಲ್ಲ ತಲೆಕೆಳಗಾಗಿವೆ.

ನಮ್ಮ ಗಣರಾಜ್ಯವನ್ನು ರಾಜಕೀಯ ಪಕ್ಷಗಳು ನಿರ್ವಹಿಸುತ್ತಿವೆ. ಆದರೆ ಅವೇ ಪ್ರಜಾತಾಂತ್ರಿಕ ಶಿಸ್ತಿನಿಂದ ದೂರಾಗಿವೆ. ಒಂದು ವ್ಯವಸ್ಥಿತ ಪಕ್ಷ-ರಾಜಕಾರಣದ ಪದ್ಧತಿಯನ್ನು ರೂಪಿಸಿಕೊಳ್ಳಲು ನಾವು ವಿಫಲರಾಗಿರುವುದು ನಮ್ಮ ಗಣರಾಜ್ಯ ಎಡವುತ್ತಿರುವುದಕ್ಕೆ ಇನ್ನೊಂದು ಉದಾಹರಣೆ.

೫೭ನೇ ವರ್ಷದ ಗಣರಾಜ್ಯೋತ್ಸವದ ಸಂದರ್ಭದಲ್ಲಾದರೂ ಎಡವುತ್ತಿರುವ ನಮ್ಮ ಗಣರಾಜ್ಯವನ್ನು ಸರಿಯಾಗಿ ನಿಲ್ಲಿಸುವ ಕೆಲಸ ಮಾಡೋಣ.

* * *

ಶ್ರೇಷ್ಠ ಸಂಗೀತಗಾರನೊಂದಿಗೆ ಸಂಗೀತಮಯ ಸಂಜೆ

-ವತ್ಸಲಾ ವೇದಾಂತಮ್

ಬಿಸ್ಮಿಲ್ಲಾಖಾನ್ ಶಹನಾಯಿ ವಾದ್ಯದ ಗಾರುಡಿಗ. ಅವರು ಶಹನಾಯಿ ನುಡಿಸಲು ಪ್ರಾರಂಭಿಸಿದರೆ ಕೇಳುಗ ಈ ಪ್ರಪಂಚವನ್ನೇ ಮರೆಯುತ್ತಾನೆ. ಶಹನಾಯಿ ವಾದ್ಯದ ನುಡಿಸುವಿಕೆಯಲ್ಲಿ ಬಿಸ್ಮಿಲ್ಲಾಖಾನ್ ಅದ್ವಿತೀಯ ಕಲೆಗಾರ. ಇಂಥ ಅಸಾಮಾನ್ಯ ವ್ಯಕ್ತಿಯನ್ನು ಭೇಟಿಮಾಡಲು ನನಗೆ ಕಳೆದ ತಿಂಗಳು ಅವಕಾಶ ಸಿಕ್ಕಾಗ ನಾನು ಸ್ವಲ್ಪ ಗಲಿಬಿಲಿಗೊಂಡೆ. ಸಂದರ್ಶನವನ್ನು ಹೇಗೆ ಪ್ರಾರಂಭಿಸಬೇಕೆಂದು ಆಲೋಚನೆಗೆ ಒಳಗಾದೆ ಏಕೆಂದರೆ ಬಿಸ್ಮಿಲ್ಲಾಖಾನ್‌ರಿಗೆ ಇಂಗ್ಲೀಷ್ ಮಾತನಾಡುವ ಪತ್ರಕರ್ತರೆಂದರೆ ಅಷ್ಟಕಷ್ಟೆ. ಅವರ ಸಹಾಯಕರು ಈ ಮೊದಲೆ ನನಗೆ ಬಿಸ್ಮಿಲ್ಲಾಖಾನ್ ವಿದೇಶಿ ಭಾಷೆಯಲ್ಲಿ ಮಾತನಾಡುವುದಿಲ್ಲವೆಂದು ಸೂಚಿಸಿದ್ದರು. ನಿಜವಾಗಿಯೂ ನನ್ನನ್ನು ಹೆಚ್ಚು ಅಧೀರಳನ್ನಾಗಿ ಮಾಡಿದ ಸಂಗತಿ ವಿದೇಶಿ ಭಾಷೆಯಲ್ಲಿ ತಮ್ಮೊಂದಿಗೆ ಮಾತನಾಡಿದರೆ ಖಾನ್ ಸಾಹೇಬರು ಕೋಪಿಸಿಕೊಳ್ಳುತ್ತಾರೆಂಬುದು. ನನಗೆ ಉರ್ದುನಲ್ಲಾಗಲಿ, ಹಿಂದಿಯಲ್ಲಾಗಲಿ ಸರಾಗವಾಗಿ ಮಾತನಾಡುವ ಸಾಮರ್ಥ್ಯವಿರಲಿಲ್ಲ. ಹಿಂದಿನ ದಿನ ಸಾಯಂಕಾಲವಷ್ಟೆ ನಡೆದಂಥ ಒಂದು ಕಛೇರಿಯಲ್ಲಿ ಅದರ ಸಂಘಟಕರು, ತಾಂತ್ರಿಕ ಸಿಬ್ಬಂದಿ ಮತ್ತು ಶ್ರೋತೃಗಳೂ ಖಾನರ ಕೋಪಕ್ಕೆ ತುತ್ತಾಗಿದ್ದರು. ಆದ್ದರಿಂದ ಅವರೊಂದಿಗಿನ ಈ ನನ್ನ ಸಂದರ್ಶನ ವಿಫಲವಾಗುವುದೆಂದೇ ಭಾವಿಸಿದ್ದೆ. ನಾನು ಖಾನ್‌ರ ಸಂದರ್ಶನಕ್ಕಾಗಿ ಆ ಹೋಟೆಲಿನ ಪ್ರಾಂಗಣದಲ್ಲಿ ಸಂದರ್ಶನದ ಸಮಯಕ್ಕಿಂತ ೧೦ ನಿಮಿಷ ಮುಂಚೆ ಹೋಗಿ ಕುಳಿತುಕೊಂಡೆ. ಖಾನ್ ಸಾಹೇಬರು ತಮ್ಮ ಸಂಜೆಯ ನಮಾಜಿಗಾಗಿ ಸಿದ್ಧಗೊಳ್ಳುತ್ತಿದ್ದಾರೆಂದು ಅವರ ಸಹಾಯಕರು ನನಗೆ ತಿಳಿಸಿದರು. ಒಂದು ಗಂಟೆಯ ನಂತರ ನನ್ನನ್ನು ಅವರ ವಾಸಸ್ಥಳಕ್ಕೆ ಕರೆದರು. ನಾನು ಒಳಗೆ ಹೋದಾಗ ಅವರು ತಮ್ಮ ಮಂಚದ ಮೇಲೆ ಅಡ್ಡಾಗಿದ್ದರು. ನಾನು ನಿರೀಕ್ಷಿಸಿದಂತೆ ಯಾರು ಮಾತೃಭಾಷೆಯಲ್ಲಿ ಮಾತನಾಡುವುದಿಲ್ಲವೊ ಅಂಥವರನ್ನು ತಾನು ಇಷ್ಟಪಡುವುದಿಲ್ಲವೆಂಬುದಾಗಿ ತಮ್ಮ ದ್ವಿಭಾಷಿಯ ಮೂಲಕ ನೇರವಾಗಿ ತಿಳಿಸಿಗರು. ನಾನು ಸೋಲನ್ನೊಪ್ಪಬಾರದೆಂದು ತೀರ್ಮಾನಿಸಿದೆ. ನಾನು ಕನ್ನಡ, ತಮಿಳು, ತೆಲುಗು, ಮಾತನಾಡಬಲ್ಲೆ ಇವೆಲ್ಲವೂ ಭಾರತೀಯ ಭಾಷೆಗಳು. ಅವರು ಯಾವ ಭಾಷೆಯನ್ನು ಇಷ್ಟಪಡುತ್ತಾರೆ. ಇದನ್ನು ಖಾನ್ ಸಾಹೇಬರಿಗೆ ಕೇಳಿರೆಂದು ದ್ವಿಭಾಷಿಗೆ ಹೇಳಿದೆ. ಆಗ ಆ ವಯೋವೃದ್ಧ ವ್ಯಕ್ತಿ ಈ ಮಾತನ್ನು ಕೇಳಿ ತಮ್ಮ ಬೊಚ್ಚುಬಾಯಿಯ ನಗು ಬೀರಿದರು. ಹೃದಯವನ್ನು ಕರಗಿಸುವಂಥ ನಗು ಅದು. ಆನಂತರ ಆ ವಿಷಯದ ಬಗ್ಗೆ ಯಾವ ಚರ್ಚೆಯೂ ನಡೆಯಲಿಲ್ಲ. ಅವರು ತಮ್ಮ ಭಾಷೆಯಲ್ಲಿ ಮಾತನಾಡಿದರು. ನಾನು ನನ್ನ ಭಾಷೆಯಲ್ಲಿ. ಅದೊಂದು ಅಪೂರ್ವವಾದ ಅನುಭವ. ಅವರನ್ನು ಅಭಿನಂದಿಸುವುದರ ಮೂಲಕ ಸಂದರ್ಶನವನ್ನು ಪ್ರಾರಂಭಿಸಲು ತೀರ್ಮಾನಿಸಿದೆ.

ನಿನ್ನೆ ಸಂಜೆಯ ನಿಮ್ಮ ಕಛೇರಿ ಅದ್ಭುತವಾಗಿತ್ತು.

(ನಗುತ್ತಾ) ಹೌದು ನನ್ನ ಐದು ಗಂಡು ಮಕ್ಕಳು ಸೊಗಸಾಗಿ ನುಡಿಸಿದರು. ವಿಶೇಷವಾಗಿ ನನ್ನ ಕಿರಿಯ ಮಗ ನಾಸಿರ್‌ನದು ತಬಲದಲ್ಲಿ ಪಳಗಿದ ಕೈ. ಹಿರಿಯಮಗ ನೈಯರ್‌ಹುಸೇನ್ ಈ ಮುಂಚೆ ನನಗೆ ಗುಟ್ಟಾಗಿ ಹೇಳಿದ್ದ. ಉದಾರವಾದ ನನ್ನ ತಂದೆ ಕಟ್ಟುನಿಟ್ಟಿನ ಶಿಸ್ತುಗಾರರೂ ಆಗುತ್ತಾರೆ. "ನಾವು ಚಿಕ್ಕವರಿದ್ದಾಗ ತಪ್ಪು ರಾಗವನ್ನು ನುಡಿಸಿದಲ್ಲಿ ಅವರು ನಮ್ಮನ್ನು ಹೊಡೆಯುತ್ತಿದ್ದರು".

ನೀವು ಬೆಂಗಳೂರಿನ ಶ್ರೋತೃಗಳನ್ನು ಇಷ್ಟಪಡುತ್ತೀರ?

(ತಮ್ಮ ಕೈಯನ್ನು ಎತ್ತಿ ಹೇಳಿದರು) ಶ್ರೋತೃಗಳು ಯಾರಾದರೇನು? ಅವರು ಹತ್ತು ಜನ ಇರಬಹುದು ಅಥವಾ ಸಾವಿರ ಜನ ಇರಬಹುದು ನನ್ನ ಸಂಗೀತ ದೇವರ ಆರಾಧನೆ.

ಹಾಗಿದ್ದ ಮೇಲೆ ನೀವು ಕಛೇರಿಗಾಗಿ ಐದುಲಕ್ಷ ರೂಪಾಯಿಗಳನ್ನು ಏಕೆ ಕೇಳುತ್ತೀರಿ?

(ಹತಾಶಭಾವನೆಯನ್ನು ವ್ಯಕ್ತಪಡಿಸುವುದಕ್ಕಾಗಿ ತಮ್ಮ ಕೈಗಳನ್ನು ಮೇಲಕ್ಕೆ ನೀಡುತ್ತಾರೆ) ವಾರಣಾಸಿಯುಲ್ಲಿ ನಾನು ೪೦೦ ಬಡ ಕುಟುಂಬಗಳಿಗೆ ನೆರವಾಗುತ್ತೇನೆಂಬುದು ನಿಮಗೆ ಗೊತ್ತಿಲ್ಲವೆ? ಎಷ್ಟೊಂದು ಅನಾಥರು... ನನ್ನ ಎಲ್ಲ ಗಳಿಕೆಗಳನ್ನು ಅವರಿಗೆ ಕಳುಹಿಸುತ್ತೇನೆ.

ವಾರಣಾಸಿಯ ನಿಮ್ಮ ಜೀವನದ ಬಗ್ಗೆ ಹೇಳಿರಿ.

ಪ್ರತಿ ದಿನ ನಾನು ಮೂರು ತಾಸುಗಳನ್ನು ಗಂಗಾಘಾಟಿನಲ್ಲಿ ಕಳೆಯುತ್ತೇನೆ. ನನ್ನ ದಿನದ ನಮಾಜನ್ನು ಐದು ಸಲ ಮಾಡುತ್ತೇನೆ. ಬಹುಶಃ ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ನಿಯಮಿತವಾಗಿ ಹೋಗುತ್ತಿರುವ ಭಾರತೀಯ ನಾನೊಬ್ಬನೆ. (ತಮ್ಮ ಸೇವಕರತ್ತ ತಿರುಗುತ್ತಾರೆ) ಬೆಂಗಳೂರಿನಲ್ಲಿ ನಾನು ಹೋಗಬಹುದಾದ ದೇವಸ್ಥಾನವಿದೆಯೆ? ನಾನು ಎಲ್ಲ ಧರ್ಮಗಳನ್ನು ಗೌರವಿಸುತ್ತೇನೆ. ಹಿಂದೂ ಧರ್ಮದಲ್ಲಿ ಘರ್ಷಣೆ ಇಲ್ಲ. ಪ್ರತಿಯೊಬ್ಬರೂ ತಮ್ಮ ಧಾರ್ಮಿಕ ನಂಬಿಕೆಗಳನ್ನು ಹಿಂದೂವಾಗಲಿ, ಮುಸಲ್ಮಾನರಾಗಲಿ ಪಾಲಿಸಬೇಕು.

ನೀವು ಸಾರ್ವಜನಿಕ ಕಛೇರಿ ನಡೆಸುವುದರಿಂದ ಯಾವಾಗ ನಿವೃತ್ತಿಹೊಂದಲು ಆಲೋಚಿಸಿದ್ದೀರಿ?

(ಈ ಮಾತನ್ನು ಅಲ್ಲಗೆಳೆಯುತ್ತ) ಸಂಗೀತ ಕ್ಷೇತ್ರದಲ್ಲಿ ನಿವೃತ್ತಿ ಎಂಬುದಿಲ್ಲ. ಅದು ಅಮರ. ಇದನ್ನು ಕೇಳಿ. (ಕೋಣೆಯು ಕಮಾಜ್‌ರಾಗ್ ನಿಂದ ಧ್ವನಿಧ್ವನಿತವಾಯಿತು)

ನಿಮ್ಮ ಧ್ವನಿ ಶಹನಾಯಿಯಂತೆಯೆ ಕೇಳುತ್ತದೆ. ಅದು ಮನೋಹರವಾಗಿದೆ.

ಅದು ದೇವರ ಕಾಣಿಕೆ. ಅಗಣಿತ ಶ್ರೋತೃಗಳನ್ನು ಸಂತೋಷಗೊಳಿಸಬೇಕೆಂದು ನನ್ನ ಮೇಲೆ ಅಲ್ಲಾನ ಆಶಿರ್ವಾದವಿದೆ. (ತಾವು ನಿಲ್ಲಿಸಿದ್ದ ರಾಗದ ಎಳೆಯನ್ನು ಪುನಃ ಎತ್ತಿಕೊಳ್ಳುತ್ತಾರೆ) ನೀವು ಈ ಸಂಗೀತದ ಧ್ವನಿಯನ್ನು ಕೇಳಬಲ್ಲಿರಾ ಎಂದು ಪ್ರಶ್ನಿಸುತ್ತಾರೆ. ಸಂಗೀತದ ಅನುಭವ ನಿಮಗೆ ಆಗುತ್ತದೆ ದೇವರು ಸಂಗೀತದ ಧ್ವನಿಯಂತೆ. ಅವನು ಸರ್ವಾಂತರ್ಯಾಮಿ ಆದರೆ ಅಗೋಚರ.

ನೀವು ಅಷ್ಟು ಚಿಕ್ಕ ವಾದ್ಯದಿಂದ ಎಷ್ಟು ದೈವಿಕ ಧ್ವನಿಯನ್ನು ನಿರ್ಮಿಸಲು ಸಮರ್ಥರಾಗಿದ್ದೀರಿ?

ಖಾನ್ ಸಾಹೇಬರು ನಗುತ್ತಾರೆ ಮತ್ತು ತಮ್ಮ ದಿಂಬಿನ ಕೆಳಗೆ ಕೈ ಹಾಕಿ ಹುಡುಕುತ್ತಾರೆ ಅಲ್ಲಿ ಅವರ ಶಹನಾಯಿ ಯಾವಾಗಲೂ ವಿಶ್ರಾಂತಿಪಡೆಯುತ್ತಿರುತ್ತದೆ ಅವರು ತಮ್ಮ ಬೆರಳುಗಳನ್ನು ವಾದ್ಯದ ಮೇಲೆ ಮತ್ತು ಕೆಳಗೆ ಆಡಿಸುತ್ತಾರೆ ಮತ್ತು ತಮ್ಮಷ್ಟಕ್ಕೆ ತಾವೆ ಮಾತನಾಡುತ್ತಾರೆ ಧ್ವನಿ ಸಂಗೀತದ ಮಾಧ್ಯಮ. ದೇವರು ಧ್ವನಿಯನ್ನು ಸೃಷ್ಟಿಸಿದ. ಆದ್ದರಿಂದ ಅವನು ಸೃಷ್ಟಿಕರ್ತ ಮತ್ತು ಧ್ವನಿ ಎರಡೂ ಆಗಿದ್ದಾನೆ.

ಶಹನಾಯಿಯನ್ನು ಪುನಃ ದಿಂಬಿನಕೆಳಗೆ ಇಟ್ಟು ಅದನ್ನು ತಟ್ಟುತ್ತಾರೆ. ಇದು ಖಂಡಿತವಾಗಿಯೂ ಅಲ್ಲಾ, ರಾಮರ ಕಾಣಿಕೆ.

ನಾನು ವಿಷಯವನ್ನು ಬದಲಾಯಿಸುತ್ತೇನೆ.

ನೀವು ಬಹಳಷ್ಟು ಪ್ರವಾಸ ಮಾಡುತ್ತೀರೊ?

ನಾನು ಒಂದು ಕಾರ್ಯಕ್ರಮಕ್ಕಾಗಿ ಕಾಶ್ಮೀರಕ್ಕೆ ಹೋಗಿದ್ದೆ. ಈ ದೇಶದ ಎಲ್ಲ ದೇವಸ್ಥಾನಗಳಲ್ಲಿ ನಾನು ಕಛೇರಿ ನಡೆಸಿದ್ದೇನೆ. ನನ್ನ ಸಂಗೀತದ ಮೂಲಕ ಭಾರತದಲ್ಲಿ ಏಕತೆ ತರಬಯಸುತ್ತೇನೆ.

ಇದ್ದಕ್ಕಿದ್ದಂತೆ ಹಾಗೆಯೇ ಸೊಗಸಾದ ಟುಮರಿ "ತಾನನ ನಾನನ"

ವಿದೇಶಗಳಲ್ಲೂ ಪ್ರವಾಸ ಮಾಡುತ್ತೀರಾ

ಜಾವೆದ್ ಅಹಮದ್‌ರ ತಂದೆ ಅಮೆರಿಕಾದಲ್ಲೇಕೆ ಇರುವುದಿಲ್ಲವೆಂದು ಕೇಳುತ್ತಿದ್ದರು. ಅಮೆರಿಕಾ! ನಾನು ಅಮೇರಿಕಾದಲ್ಲಿ ನೆಲಸಿದರೆ ನನಗೆ ಬೇಕಾದುದೆಲ್ಲವನ್ನು ಕೊಡುವ ಆಮಿಷವನ್ನು ಅನೇಕ ಭಾರತೀಯರು ಒಡ್ಡಿದ್ದರು.

ನೀವು ಅವರ ಆಹ್ವಾನವನ್ನು ಸ್ವೀಕರಿಸಲಿಲ್ಲವೆ!

ಬಹು ದೊಡ್ಡಮುಗುಳ್ನಗೆಯನ್ನು ಬೀರುತ್ತಾ ಹೇಳಿದರು. "ಅವರಿಗೆ ನನ್ನ ಉತ್ತರ: ನೀವು ನನಗೆ ಗಂಗೆಯನ್ನು ಕೊಡಬಲ್ಲಿರಾ, ನನ್ನ ಮೂರು ಬಣ್ಣದ ಬಾವುಟ ಕೊಡಬಲ್ಲಿರಾ, ನನ್ನ ಮಾತೃಭೂಮಿಯನ್ನು ಕೊಡಬಲ್ಲಿರಾ, ನನ್ನ ನದಿಯನ್ನು ಕೊಡಬಲ್ಲಿರಾ, ನನ್ನ ವಾರಣಾಸಿಯನ್ನು ಕೊಡಬಲ್ಲಿರಾ, ಅವೆಲ್ಲ ಇಲ್ಲಿವೆ."

ಖಾನ್‌ಸಾಹೇಬರ ಜೊತೆಗೆ ನಾನು ನಿಗದಿತ ಸಮಯಕ್ಕಿಂತ ಹೆಚ್ಚು ಸಮಯ ಕಳೆದಿದ್ದೆ. ಅಷ್ಟೊತ್ತಿಗೆ ಬೇರೆ ಸಂದರ್ಶಕರು ಒಳಬರಲು ಪ್ರಾರಂಭಿಸಿದ್ದರು. ಅವರಲ್ಲಿ ಓರ್ವ ಕನ್ನಡ ನಟಿ ಇದ್ದಳು. ಕ್ರಿಕೆಟ್ ಆಟಗಾರ ಸಯ್ಯದ್ ಕಿರ್ಮಾನಿ ಇದ್ದರು. ನಾನು ಖಾನರಿಗೆ ನಮಸ್ಕರಿಸಿ ಹೊರಡಲು ಎದ್ದೆ "ಹೇ ಹೇ ಎಂದು ನನ್ನನ್ನು ಕರೆದರು ಹಾಸಿಗೆಯ ಮೇಲೆ ಕೈ ತಟ್ಟುತ್ತಾ ಇಲ್ಲಿ ಬಂದು ಒಂದು ನಿಮಿಷ ಕುಳಿತುಕೊಳ್ಳಿ".

ನನ್ನ ಬಾಹುಗಳ ಸುತ್ತ ವಾತ್ಸಲ್ಯದ ಕೈಯನ್ನು ಹಾಕಿ ಕಿರ್ಮಾನಿಗೆ ನಮ್ಮಿಬ್ಬರ ಭಾವಚಿತ್ರ ತೆಗೆದುಕೊಳ್ಳಲು ಹೇಳಿದರು! ಈ ಒಂದು ಘಳಿಗೆಯನ್ನು ನನ್ನ ಜೀವನದಲ್ಲಿ ಯಾವಾಗಲೂ ಅಮೂಲ್ಯವೆಂದು ಭಾವಿಸುವೆನು.

(ಸಾಭಾರ ಡೆಕ್ಕನ್‌ಹೆರಾಲ್ಡ್) ಅನು–ಸು.ಕೌ

ಅಮೆರಿಕ-ಭಾರತ ರಾಷ್ಟ್ರಪತಿಗಳ ಸಾಮ್ಯತೆ-ಭಿನ್ನತೆ

-ಸಿ.ಎಂ.ರಾಮಚಂದ್ರ

ವಿದೇಶಿ ಮೂಲದ ವ್ಯಕ್ತಿ ದೇಶದ ಪ್ರಧಾನಿ ಅಥವಾ ರಾಷ್ಟ್ರಪತಿಯಾಗಬಹುದೇ ಎಂಬ ಬಗ್ಗೆ ಭಾರತದಲ್ಲಿ ದೊಡ್ಡ ವಿವಾದವೇ ಏರ್ಪಟ್ಟಿದೆ. ಆದರೆ ಈ ಕುರಿತಂತೆ ಅಮೆರಿಕದಲ್ಲಿ ಸ್ಪಷ್ಟ ಶಾಸನವಿದೆ. ಅದರ ಪ್ರಕಾರ ಆ ದೇಶದಲ್ಲಿ ವಿದೇಶಿ ಸಂಜಾತರು ರಾಷ್ಟ್ರಾಧ್ಯಕ್ಷರಾಗುವಂತಿಲ್ಲ.

ಅಮೆರಿಕದ ರಾಷ್ಟ್ರಾಧ್ಯಕ್ಷರಿಗೆ ಇರಬೇಕಾದ ಮೂಲಭೂತ ಶಾಸನಬದ್ಧ ಅರ್ಹತೆ, ಅವರು ಅಮೆರಿಕದಲ್ಲೇ ಹುಟ್ಟಿದವರಾಗಿರಬೇಕು. ಜತೆಗೆ ೧೪ ವರ್ಷ ಅಲ್ಲೇ ನೆಲೆಸಿರಬೇಕು. ಕನಿಷ್ಟ ೩೫ ವರ್ಷ ವಯಸ್ಸಾಗಿರಬೇಕು. ತೀರಾ ಇತ್ತೀಚಿನವರೆಗೂ ಸಾಂಪ್ರದಾಯಿಕವಾದ ಇನ್ನೊಂದು ನಿಯಮವಿತ್ತು. ಅದೆಂದರೆ ರಾಷ್ಟ್ರಾಧ್ಯಕ್ಷರಾಗುವವರು ವಿಚ್ಛೇದಿತರಾಗಿರಬಾರದು. ಅಂದರೆ ರಾಷ್ಟ್ರದ ಅತ್ಯುನ್ನತ ಹುದ್ದೆಗೇರುವವರು ನೈತಿಕವಾಗಿ ಪರಿಶುದ್ಧರಾಗಿರಬೇಕು.

ಆದರೆ ಈ ನಿಯಮಕ್ಕೆ ಮಾಜಿ ಅಧ್ಯಕ್ಷ ರೊನಾಲ್ಡ್ ರೇಗನ್ ಹೊರತಾಗಿದ್ದರು. ಮೊದಲ ಪತ್ನಿಯಿಂದ ವಿಚ್ಛೇದನ ಪಡೆದು ಮರುವಿವಾಹವಾಗಿದ್ದ ರೇಗನ್ ಅದುವರೆಗಿನ ಸಂಪ್ರದಾಯ ಮುರಿದ ರಾಷ್ಟ್ರಾಧ್ಯಕ್ಷರಾದರು.

ಅಮೆರಿಕದಲ್ಲಿ ರಾಷ್ಟ್ರಾಧ್ಯಕ್ಷರ ಚುನಾವಣೆಗೆ ಸಂಬಂಧಿಸಿದಂತೆ ರಾಜಕೀಯ ನೈತಿಕತೆಗೆ ಗರಿಷ್ಠ ಪ್ರಾಮುಖ್ಯತೆ ಕೊಡಲಾಗುತ್ತದೆ. ಇದೇ ಮಾನದಂಡವನ್ನು ಮುಂದಿಟ್ಟುಕೊಂಡು ಅಭ್ಯರ್ಥಿಯೊಬ್ಬರನ್ನು ಚುನಾವಣೆಯಿಂದ ಅನರ್ಹಗೊಳಿಸಿದ ನಿದರ್ಶನವೂ ಆ ದೇಶದ ಇತಿಹಾಸದಲ್ಲಿ ದಾಖಲಾಗಿದೆ. ಲೈಂಗಿಕ ಹಗರಣದಲ್ಲಿ ಸಿಕ್ಕಿಬಿದ್ದ ಗ್ಯಾರಿಹಾರ್ಟ್ ಎಂಬ ಡೆಮೊಕ್ರಾಟಿಕ್ ಅಭ್ಯರ್ಥಿಯನ್ನು ಚುನಾವಣೆಯಿಂದಲೇ ಅನರ್ಹಗೊಳಿಸಲಾಗಿತ್ತು.

ಆದರೆ ಭಾರತದಲ್ಲಿ ತದ್ವಿರುದ್ಧ ಪರಿಸ್ಥಿತಿ ಇದೆ. ಇಲ್ಲಿ ಅಭ್ಯರ್ಥಿಯು ಎಷ್ಟೇ ತೀವ್ರತರವಾದ ರಾಜಕೀಯ ಅವ್ಯವಹಾರಗಳಲ್ಲಿ ಭಾಗಿಯಾಗಿದ್ದರೂ ಅದು ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ತೊಡಕಾಗುವುದಿಲ್ಲ.

ಅಮೆರಿಕದಲ್ಲಿ ಅಧ್ಯಕ್ಷರು ತಲಾ ನಾಲ್ಕು ವರ್ಷಗಳ ಎರಡು ಅವಧಿಗೆ ಮಾತ್ರ ಅಧಿಕಾರದಲ್ಲಿರಬಹುದು. ಅದು ಸತತವಾಗಿಯೂ ಆಗಬಹುದು ಅಥವಾ ಎರಡು ಅವಧಿಗಳ ನಡುವೆ ಅಂತರವೂ ಇರಬಹುದು. ಹಿಂದಿನ ಅಧ್ಯಕ್ಷ ಬಿಲ್ ಕ್ಲಿಂಟನ್ ಸತತ ಎರಡು ಅವಧಿಗೆ ಅಧ್ಯಕ್ಷರಾಗಿದ್ದರು. ೧೯೫೧ರ ವರೆಗೂ ಅನಿಯಮಿತ ಅವಧಿಯವರೆಗೆ ರಾಷ್ಟ್ರಾಧ್ಯಕ್ಷರಾಗುವ ಅವಕಾಶ ಆ ದೇಶದಲ್ಲಿತ್ತು.

ಹಿಂದೆ ಫ್ರಾಂಕ್ಲಿನ್ ಡಿ.ರೂಸ್‌ವೆಲ್ಟ್ ನಾಲ್ಕು ಅವಧಿಗೆ ಅಮೆರಿಕಾದ ಅಧ್ಯಕ್ಷರಾಗಿದ್ದರು. ಆದರೆ ತಮ್ಮ ನಾಲ್ಕನೇ ಅವಧಿಯ ಆರಂಭದಲ್ಲಿ [ಏಪ್ರಿಲ್ ೧೨-೧೯೪೫] ಅವರು ನಿಧನರಾದರು. ಅನಂತರ ಹಲವಾರು ರಾಷ್ಟ್ರಾಧ್ಯಕ್ಷರು ಎರಡು ಅವಧಿಗೆ ದೇಶವನ್ನಾಳಿದರು. ದೇಶದ ಈಗಿನ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಷ್ ಮಾಜಿ ಅಧ್ಯಕ್ಷ ಬುಷ್ ಅವರ ಮಗ. ಒಂದರ್ಥದಲ್ಲಿ ಅಲ್ಲಿಯೂ ವಂಶಪಾರಂಪರ್ಯದ ಆಡಳಿತಕ್ಕೆ ಅವಕಾಶವಿದೆ ಎಂದೇ ಹೇಳಬಹುದು. ಆದರೆ ಭಾರತದಲ್ಲಿ ನಾವು ನೋಡುವ ವಂಶಪಾರಂಪರ್ಯದ ರಾಜಕಾರಣಕ್ಕೂ ಬುಷ್ ಅವರ ವಿಷಯಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಒಂದು ಹಂತದವರೆಗೆ ಅಮೆರಿಕದ ಚುನಾವಣೆಯೂ ವ್ಯಕ್ತಿ ಆಧಾರಿತ ರಾಜಕಾರಣದಿಂದ ದೂರವಾಗಿಲ್ಲ. ಅಲ್ಲಿಯ ರಾಜಕಾರಣವೂ ಸಿನಿಮಾ ಗ್ಲಾಮರ್‌ನಿಂದ ಮುಕ್ತವಾಗಿಲ್ಲ. ಶೀತಲ ಸಮರಕ್ಕೆ ಚುರುಕು ಮುಟ್ಟಿಸಿದವರೆಂಬ ಖ್ಯಾತಿ ಹೊತ್ತಿರುವ ರೊನಾಲ್ಡ್ ರೇಗನ್ ಸೆಲ್ಯೂಲಾಯ್ಡ್ ಜಗತ್ತಿನಿಂದ ಬಂದವರು. ಒಂದು ರೀತಿ ನಮ್ಮ ಎನ್.ಟಿ.ಆರ್, ಎಂ.ಜಿ.ಅರ್, ಜಯಲಲಿತಾ ಇದ್ದಂತೆ! ಅಮೆರಿಕ ರಾಜಕಾರಣದಲ್ಲಿ ವ್ಯಕ್ತಿ ಪೂಜೆಗೂ ಮನ್ನಣೆ ಇದೆ ಎಂಬುದಕ್ಕೆ ಕೆನಡಿ ಮನೆತನದ ಜನಪ್ರಿಯತೆಯೇ ಸಾಕ್ಷಿ. ರಾಷ್ಟ್ರಾಧ್ಯಕ್ಷರ ಹುದ್ದೆಗೇರಿದ ಜಾನ್ ಎಫ್. ಕೆನಡಿ ಈ ಮನೆತನಕ್ಕೆ ಸೇರಿದವರು. ಶ್ವೇತಭವನದಲ್ಲಿ ಕೆನಡಿ ಅವರ ಸಾಹಸಗಳ ಬಗ್ಗೆ ಸಾಕಷ್ಟು ಕತೆಗಳಿವೆ. ಕೆನಡಿ ನವೆಂಬರ್ ೨೨-೧೯೬೩ರಲ್ಲಿ ದುಷ್ಕರ್ಮಿಯ ಗುಂಡಿಗೆ ಬಲಿಯಾದರು. ಇದೇ ರೀತಿ ಹತ್ಯೆಗೀಡಾದ ಇನ್ನೊಬ್ಬ ಅಮೆರಿಕ ಅಧ್ಯಕ್ಷ ಅಬ್ರಾಹಾಂ ಲಿಂಕನ್. ನಮ್ಮಲ್ಲಿ ಇಬ್ಬರು ಪ್ರಧಾನಮಂತ್ರಿಗಳಾದ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಇದೇ ರೀತಿ ಹಂತಕರ ಸಂಚಿಗೆ ಬಲಿಯಾಗಿದ್ದಾರೆ.

ಅಧಿಕಾರದ ದೃಷ್ಟಿಯಿಂದ ಅಮೆರಿಕಾ ಮತ್ತು ಭಾರತದ ರಾಷ್ಟ್ರಪತಿಗಳನ್ನು ಹೋಲಿಸಿ ನೋಡುವುದು ಸಾಧ್ಯವೇ ಇಲ್ಲ. ಅಮೆರಿಕ ರಾಷ್ಟ್ರಾಧ್ಯಕ್ಷರ ಕಚೇರಿ ಪ್ರಜಾಪ್ರಭುತ್ವದ ಜಗತ್ತಿನಲ್ಲಿ ಅತ್ಯಂತ ಪ್ರಬಲ ಮತ್ತು ಅಧಿಕಾರಯುತ ಶಕ್ತಿ ಕೇಂದ್ರ. ಅಮೆರಿಕದ ರಾಷ್ಟ್ರಾಧ್ಯಕ್ಷರು ದೇಶದ ಮುಖ್ಯ ಕಾರ್ಯನಿರ್ವಾಹಕ. ದೇಶದ ಕಾಂಗ್ರೆಸ್‌ನ [ಪ್ರತಿನಿಧಿ ಸಭೆ ಮತ್ತು ಸೆನೆಟ್] ನಿರ್ಧಾರಗಳನ್ನು ನಿರ್ಲಕ್ಷಿಸುವ ಅಥವಾ ಬದಲಿಸುವ ಪರಮೋಚ್ಚ ಅಧಿಕಾರ ರಾಷ್ಟ್ರಾಧ್ಯಕ್ಷರಿಗಿದೆ. ಆದರೆ ಭಾರತದಲ್ಲಿ ರಾಷ್ಟ್ರಪತಿಗಳ ಅಧಿಕಾರ ಸೀಮಿತವಾದದು. ರಾಷ್ಟ್ರಪತಿ ಅಧಿಕಾರ ವಿಷಯ ಬಂದಾಗ ಇಲ್ಲಿ 'ರಬ್ಬರ್ ಸ್ಟಾಂಪ್' ಎಂಬ ಪದ ಬಳಸದೇ ಇರುವುದು ಬಹಳ ಕಷ್ಟ. ಸಚಿವ ಸಂಪುಟದ ತೀರ್ಮಾನಗಳಿಗೆ ಅನುಗುಣವಾಗಿ ನಡೆದುಕೊಳ್ಳುವುದು ಭಾರತದ ರಾಷ್ಟ್ರಪತಿಗಳ ಕೆಲಸ. ನಮ್ಮಲ್ಲಿ ಪ್ರಧಾನಿಮಂತ್ರಿಯೇ ಅಧಿಕಾರದ ಶಕ್ತಿ ಕೇಂದ್ರ. ನಮ್ಮಲ್ಲಿ ಬ್ರಿಟನ್ನಿನ; 'ವೆಸ್ಟ್ ಮಿನಿಸ್ಟರ್ ಸಿಸ್ಟಮ್' ಆಧಾರಿತ ವ್ಯವಸ್ಥೆಯಿದ್ದು, ಪ್ರಧಾನಮಂತ್ರಿಯೇ ಎಲ್ಲ ಅಧಿಕಾರವನ್ನು ಹೊಂದಿರುತ್ತಾರೆ. ಇಲ್ಲಿ ರಾಷ್ಟ್ರಪತಿ

ಕೇವಲ ಸಾಂವಿಧಾನಿಕ ಮುಖ್ಯಸ್ಥ.

ಅಮೆರಿಕದಲ್ಲಿ ರಾಷ್ಟ್ರಾಧ್ಯಕ್ಷರನ್ನು ಜನರೇ ನೇರವಾಗಿ ಚುನಾಯಿಸುತ್ತಾರೆ. ರಾಷ್ಟ್ರಪತಿ ಅಭ್ಯರ್ಥಿಗಳನ್ನು ಆಯಾ ಪಕ್ಷಗಳು ಆಯ್ಕೆ ಮಾಡಿಕೊಳ್ಳುತ್ತವೆ. ಆ ದೇಶದಲ್ಲಿರುವುದು ದ್ವಿಪಕ್ಷೀಯ ಪದ್ಧತಿ. ರಿಪಬ್ಲಿಕನ್ ಮತ್ತು ಡೆಮೊಕ್ರಾಟ್ಸ್ ಅಲ್ಲಿರುವ ಎರಡು ಪಕ್ಷಗಳು. ಪ್ರತಿ ಬಾರಿ ರಾಷ್ಟ್ರಾಧ್ಯಕ್ಷರ ಚುನಾವಣೆಗೆ ಮೊದಲು ಈ ಪಕ್ಷಗಳು ರಾಷ್ಟ್ರೀಯ ಸಮಾವೇಶ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತವೆ. ಒಂದು ವೇಳೆ ಪಕ್ಷದೊಳಗೇ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಉಮೇದುವಾರರಾಗಲು ಇಚ್ಛೆ ಪಟ್ಟರೆ ಪಕ್ಷದ ಸದಸ್ಯರು ಮತದಾನದ ಮೂಲಕ ಒಬ್ಬ ಅಭ್ಯರ್ಥಿಯನ್ನು ಆಯ್ಕೆಮಾಡುತ್ತಾರೆ. ಇಲ್ಲಿಯೂ ರಾಜಕೀಯ ಶಕ್ತಿ ಒಂದೇ ಕಡೆ ಕೇಂದ್ರಿಕರಣವಾಗುವುದನ್ನು ತಡೆಯಲು ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. (ಅಮೆರಿಕದಲ್ಲಿ ಇಂಥ ರಾಜಕೀಯ ಶಕ್ತಿ ಕೇಂದ್ರಗಳು ಅಥವಾ ಲಾಬಿಗಳನ್ನು 'ಕಾಕಸ್' ಎಂದು ಕರೆಯಲಾಗುತ್ತದೆ. ಇದನ್ನು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಕಾಲದಲ್ಲಿ ಕಾಂಗ್ರೆಸ್‌ನಲ್ಲಿ ಅಸ್ತಿತ್ವದಲ್ಲಿದ್ದ 'ಸಿಂಡಿಕೇಟ್'ಗೆ ಹೋಲಿಸಬಹುದು)

ಅಮೆರಿಕದ ಈಗಿನ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಷ್ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ೨೦೦೦ನೇ ಜುಲೈ ೧೨ರಂದು ಫಿಲೆಡೆಲ್ಫಿಯಾದಲ್ಲಿ ನಡೆದ ರಿಪಬ್ಲಿಕನ್ ಪಕ್ಷದ ಸಮಾವೇಶದಲ್ಲಿ ಬುಷ್ ರಾಷ್ಟ್ರಪತಿ ಅಭ್ಯರ್ಥಿಯಾಗಿ ಆಯ್ಕೆಯಾದರು. ಬುಷ್ ಎದುರಾಳಿಯಾಗಿದ್ದವರು ಡೆಮೊಕ್ರಾಟ್ ಪಕ್ಷದ ಹುರಿಯಾಳು ಅಲ್‌ಗೋರ್. ಗೋರ್ ಹಿಂದಿನ ಕ್ಲಿಂಟನ್ ಆಳ್ವಿಕೆಯಡಿ ಉಪಾಧ್ಯಕ್ಷರಾಗಿದ್ದರು. ಡೆಮೊಕ್ರಾಟ್ ಪಕ್ಷ ೨೦೦೦ನೇ ಆಗಸ್ಟ್‌ನಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಗೋರ್ ಅವರನ್ನು ರಾಷ್ಟ್ರಪತಿ ಹುದ್ದೆಯ ಅಭ್ಯರ್ಥಿಯನ್ನಾಗಿ ಆರಿಸಿತು. ಬುಷ್ ೧೭೮೯ರ ಬಳಿಕ ಅಮೆರಿಕದ ೪೩ನೇ ಅಧ್ಯಕ್ಷ. ಕಳೆದ ೨೦೦ಕ್ಕೂ ಹೆಚ್ಚು ವರ್ಷಗಳ ಇತಿಹಾಸದಲ್ಲಿ ಅಮೆರಿಕ ೫೨ ಬಾರಿ ರಾಷ್ಟ್ರಪತಿ ಚುನಾವಣೆ ನಡೆಸಿದೆ.

ಭಾರತ ಇದುವರೆಗೂ ೯ ರಾಷ್ಟ್ರಪತಿಗಳನ್ನು ಕಂಡಿದೆ. ಈಗ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ದೇಶದ ೧೦ ನೇ ರಾಷ್ಟ್ರಪತಿಯಾಗುವುದು ಬಹುತೇಕ ಖಚಿತವಾಗಿದೆ. ಭಾರತದಲ್ಲಿ ಅಮೆರಿಕದಂತೆ ನೇರ ಚುನಾವಣೆ ಮೂಲಕ ರಾಷ್ಟ್ರಪತಿ ಆಯ್ಕೆ ನಡೆಯುವುದಿಲ್ಲ. ನಮ್ಮಲ್ಲಿ ಸಂಸತ್ತಿನ ಉಭಯ ಸದನಗಳು ಮತ್ತು ರಾಜ್ಯ ವಿಧಾನಸಭೆಗಳ ಸದಸ್ಯರು ಮತ ಚಲಾಯಿಸುವ ಮೂಲಕ ರಾಷ್ಟ್ರಪತಿಯನ್ನು ಆಯ್ಕೆ ಮಾಡುತ್ತಾರೆ.

ಅಮೆರಿಕ ರಾಷ್ಟ್ರಪತಿ ಚುನಾವಣೆಯ ವೈಶಿಷ್ಟ್ಯವೆಂದರೆ ಇದು ಜನಪ್ರಿಯ

ನೇರ ಮತದಾನ(popular vote) ಮತ್ತು ಚುನಾಯಕರ ಮತದಾನ (Electoral vote) ಎರಡರ ಮಿಶ್ರಣ. ಸಾಮಾನ್ಯವಾಗಿ ಜನರಿಂದ ನೇರವಾಗಿ ಚುನಾಯಿತರಾಗುವ ರಾಷ್ಟ್ರಾಧ್ಯಕ್ಷರು ದೇಶದ ೫೦ ರಾಜ್ಯಗಳು ಮತ್ತು ಕೊಲಂಬಿಯಾ ಜಿಲ್ಲೆಯ ಚುನಾಯಕರ ಸಮೂಹದಲ್ಲೂ ಬಹುಮತ ಪಡೆದಿರುತ್ತಾರೆ. ಆ ದೇಶದ ಚುನಾಯಕರ ಸಮೂಹದಲ್ಲಿ ೫೩೮ ಮತದಾರರಿದ್ದು ಗೆಲುವಿಗೆ ೨೭೦ ಮತಗಳ ಅವಶ್ಯಕತೆ ಇದೆ.

೨೦೦೦ನೇ ನವೆಂಬರ್ ೭ ರಂದು ನಡೆದ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಬುಷ್, ಗೋರ್ ಮಧ್ಯೆ ತೀವ್ರ ಹಣಾಹಣಿ ನಡೆಯಿತು. ಈ ಚುನಾವಣೆ ಅಮೆರಿಕದ ಪ್ರಜಾಸತ್ತೆಗೆ ದೊಡ್ಡ ಅಘಾತ ನೀಡಿತು ಎಂದರೂ ತಪ್ಪಿಲ್ಲ. ಫ್ಲೋರಿಡಾ ರಾಜ್ಯದ ಮತ ಎಣಿಕೆಯಲ್ಲಿ ಮೊದಲು ಬುಷ್ ಮುನ್ನಡೆ ಸಾಧಿಸಿದ್ದರು. ಆದರೆ ಅಲ್ ಗೋರ್ ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಈ ಕುರಿತು ನ್ಯಾಯಾಲಯದಲ್ಲಿ ನಡೆದ ಹೋರಾಟವನ್ನು ಇಡೀ ವಿಶ್ವ ಕೌತುಕದಿಂದ ಗಮನಿಸುತ್ತಿತ್ತು. ಅಂತಿಮವಾಗಿ ಬುಷ್ ಪರ ತೀರ್ಪು ಹೊರಬಿತ್ತು. ಫಲಿತಾಂಶ ಹೊರಬಿದ್ದ ಬಳಿಕ ಚುನಾವಣೆ ಪದ್ಧತಿ ಬಗ್ಗೆ ದೇಶದೆಲ್ಲೆಡೆ ಸಾಕಷ್ಟು ಜಿಜ್ಞಾಸೆ ನಡೆಯಿತು. ಚುನಾಯಕರ ಮತವನ್ನು ರದ್ದುಪಡಿಸಬೇಕು. ಕೇವಲ ಜನಪ್ರಿಯ ಮತಗಳ ಆಧಾರದ ಮೇಲೆ ರಾಷ್ಟ್ರಾಧ್ಯಕ್ಷರನ್ನು ಆರಿಸಬೇಕು ಎಂದು ಬಹಳ ಮಂದಿ ಆಗ್ರಹಿಸಿದರು. ಕೆಲವು ಅಭ್ಯರ್ಥಿಗಳು ಜನರ ತೀರ್ಪು ತಮ್ಮ ವಿರುದ್ಧವಾಗಿದ್ದರೂ ಚುನಾಯಕರ ಮತದ ಆಧಾರದ ಮೇಲೆ ರಾಷ್ಟ್ರಪತಿಯಾಗಿ ಆಯ್ಕೆಯಾದ ನಿದರ್ಶನಗಳೂ ಇವೆ.

ಅಮೇರಿಕದಲ್ಲಿ ರಾಷ್ಟ್ರಪತಿ ಉಪರಾಷ್ಟ್ರಪತಿ ಚುನಾವಣೆಗಳು ನಿಗದಿತ ದಿನದಂದೇ ನಡೆಯುತ್ತವೆ. ಆ ದೇಶದಲ್ಲಿ ಪ್ರತಿಬಾರಿಯೂ ಜನವರಿ ೨೦ರಂದೇ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳು ಅಧಿಕಾರ ಸ್ವೀಕರಿಸುತ್ತಾರೆ.

ಅಮೇರಿಕಕ್ಕೆ ಹೋಲಿಸಿದರೆ ಭಾರತದಲ್ಲಿ ರಾಷ್ಟ್ರಪತಿ ಚುನಾವಣೆ ಹೆಚ್ಚು ಸದ್ದು ಗದ್ದಲವಿಲ್ಲದೆ ನಡೆಯುತ್ತದೆ. ಆದರೆ ಹಿಂದೆ ವಿ.ವಿ.ಗಿರಿ ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಮಾತ್ರ ನಮ್ಮಲ್ಲೂ ಕೋಲಾಹಲ ಏರ್ಪಟ್ಟಿತ್ತು. ಆಗ ಪ್ರಧಾನಿ ಇಂದಿರಾ ಗಾಂಧಿ ತಮ್ಮ ಪಕ್ಷದ ಅಭ್ಯರ್ಥಿ ನೀಲಂ ಸಂಜೀವರೆಡ್ಡಿ ಅವರಿಗೆ ಕೈಕೊಟ್ಟು ಪಕ್ಷೇತರ ಅಭ್ಯರ್ಥಿ ಗಿರಿ ಅವರನ್ನು ಬೆಂಬಲಿಸಿ, ಗೆಲ್ಲಿಸಿದ್ದು ಭಾರೀ ಗದ್ದಲ ಸೃಷ್ಟಿಸಿತ್ತು. ನಮ್ಮ ದೇಶದಲ್ಲಿ ವೈಯಕ್ತಿಕ ರಾಜಕೀಯ ತೆವಲುಗಳಿಗಾಗಿ ಯಾವ ರೀತಿ ರಾಷ್ಟ್ರಪತಿ ಪದವಿಯಂಥಾ ಉನ್ನತ ಹುದ್ದೆಯನ್ನು ರಾಜಕೀಯವಾಗಿ ಬಳಸಿಕೊಳ್ಳಬಹುದು ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆ.

(ಸಾಭಾರ–ವಿಜಯ ಕರ್ನಾಟಕ)

* * *

ಅಹಿಂಸೆ

–ಅರುಂಧತಿ ರಾಯ್

ಯುದ್ಧ ಮತ್ತು ಭಯೋತ್ಪಾದಕತೆ ಹಾಗೂ ಭಯದ ವಿರುದ್ಧದ ಯುದ್ಧಗಳ ಬಗ್ಗೆ ನಡೆಯುವ ಮಾತುಗಳಿಂದ ನಾವು ಮೋಹಿತಗೊಳ್ಳುತ್ತಿರುವ ಸಮಯದಲ್ಲಿ ಭಾರತದ ನಡುವೆ ಇರುವ ಮಧ್ಯಪ್ರದೇಶದಲ್ಲಿ ಜೀವ ಉಳಿಸುವ ಚಿಕ್ಕ ದೋಣಿಯೊಂದನ್ನು ತೇಲಿ ಬಿಡಲಾಗಿದೆ. ಭೋಪಾಲ್‌ನಲ್ಲಿ ದಾರಿಪಕ್ಕದಲ್ಲಿರುವ ಟಿನ್‌ಶೆಡ್ ಎಂಬ ಕ್ಷೇತ್ರದಲ್ಲಿ ಜನರ ಸಣ್ಣ ಗುಂಪೊಂದು ಆತ್ಮವಿಶ್ವಾಸ ಮತ್ತು ಭರವಸೆಯೆಂಬ ಯಾತ್ರೆ ಕೈಗೊಂಡಿದೆ. ಇವರು ಮಾಡುತ್ತಿರುವ ಕೆಲಸದಲ್ಲಿ ಹೊಸದೇನಿಲ್ಲ. ಹೊಸದೇನಾದರೂ ಇದ್ದರೆ ಅದು ಅವರು ಕೈಗೊಂಡಿರುವ ಯಾತ್ರೆಯ ಸುತ್ತಲಿರುವ ಪ್ರತಿಕೂಲವಾದ ಹವಾಮಾನ. ಇಂದು ನರ್ಮದಾ ಉಳಿಸಿ ಆಂದೋಲನದ ನಾಲ್ಕು ಸಕ್ರಿಯ ಕಾರ್ಯಕರ್ತರು ಕೈಗೊಂಡಿರುವ ಆಮರಣ ಉಪವಾಸದ ೨೯ ನೇ ದಿನ. ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ಗಾಂಧಿ ಕೈಗೊಂಡಿದ್ದ ಯಾವುದೇ ಉಪವಾಸಕ್ಕಿಂತ ಎರಡು ದಿನದ ಹೆಚ್ಚು ಅವಧಿಯ ಉಪವಾಸ ಕೈಗೊಂಡಿದ್ದಾರೆ. ಹಿಂದೆಂದಿಗಿಂತಲೂ ಸರಳವಾದ ಬೇಡಿಕೆ ಅವರದಾಗಿದೆ. ಮಾನ್ ಅಣೆಕಟ್ಟು ಕಟ್ಟಲು ಅನುಕೂಲವಾಗುವುದಕ್ಕಾಗಿ ಮಧ್ಯಪ್ರದೇಶ ಸರ್ಕಾರವು ೧೦೦೦ಕ್ಕಿಂತಲೂ ಹೆಚ್ಚು ಆದಿವಾಸಿ ಕುಟುಂಬಗಳನ್ನು ಎತ್ತಂಗಡಿ ಮಾಡುತ್ತಿದೆ. ಉಪವಾಸ ಕೈಗೊಂಡಿರುವ ಕಾರ್ಯಕರ್ತರು ಉಚ್ಚಾಟಿತಗೊಂಡಿರುವ ಈ ಜನಕ್ಕೆ ತಾನು ಕೊಟ್ಟ ಮಾತಿನಂತೆ ಭೂಮಿಯನ್ನು ಕೊಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದಾರೆ.

ಇಲ್ಲಿ ಯಾವುದೇ ವಿವಾದವಿಲ್ಲ. ಅಣೆಕಟ್ಟನ್ನು ಈಗಾಗಲೆ ಕಟ್ಟಲಾಗಿದೆ. ಮಳೆಗಾಲದಲ್ಲಿ ಅಣೆಕಟ್ಟು ತುಂಬಿ ಅವರ ಹಳ್ಳಿಗಳು ಹಿನ್ನೀರಿನಲ್ಲಿ ಮುಳುಗುವ ಮೊದಲು ಉಚ್ಚಾಟಿತಗೊಂಡಿರುವ ಜನರನ್ನು ಪುನರ್ವಸತಿಗೊಳಿಸಬೇಕಿದೆ. ಉಪವಾಸ ಕೈಗೊಂಡಿರುವ ಆ ನಾಲ್ಕು ಸಕ್ರಿಯ ಕಾರ್ಯಕರ್ತರಲ್ಲಿಯ ಒಬ್ಬರು ವಿನೋದ್‌ಪಟ್ವಾ ಇವರು ೧೯೯೦ರಲ್ಲಿ ಬರ್ಗಿ ಅಣೆಕಟ್ಟಿನಿಂದ ಉಚ್ಚಾಟಿತಗೊಂಡಿದ್ದ ೧೪,೦೦೦ ಜನರಲ್ಲಿ ಒಬ್ಬರಾಗಿದ್ದರು, ಆ ಬರ್ಗಿ ಅಣೆಕಟ್ಟನ್ನು ಕಟ್ಟಿ ೧೨ ವರ್ಷಗಳಾದವು. ಮುಳುಗಡೆಯಾದ ಭೂಮಿಗಿಂತಲೂ ಕಡಿಮೆ ವಿಸ್ತಾರದ ಭೂಮಿಗೆ ಬರ್ಗಿ ಅಣೆಕಟ್ಟಿನಿಂದ ನೀರಾವರಿಯಾಗುತ್ತದೆ. ಎರಡನೆಯ ಕಾರ್ಯಕರ್ತರ ಹೆಸರು ಮಂಗತ್‌ವರ್ಮ. ಈಗ ನಿರ್ಮಾಣಗೊಳ್ಳುತ್ತಿರುವ ಮಾಹೇಶ್ವರ ಅಣೆಕಟ್ಟು ಪೂರ್ತಗೊಂಡಲ್ಲಿ ಇವರು ಉಚ್ಚಾಟಿತಗೊಳ್ಳುವರು. ಇನ್ನು ಮೂರನೆಯವರು

ಚಿತ್ತರೂಪ ಪಾಲಿತ್. ಇವರು ನರ್ಮದಾ ಉಳಿಸಿ ಆಂದೋಲನದೊಂದಿಗೆ ಸರಿಸುಮಾರು ೧೫ ವರ್ಷಗಳಷ್ಟು ಕೆಲಸ ಮಾಡಿದ್ದಾರೆ. ಇನ್ನು ನಾಲ್ಕನೆಯವರು ೨೨ ವರ್ಷದ ರಾಮ್ ಕನ್ವರ್. ಇವರು ಹೋರಾಟದಲ್ಲಿ ತೊಡಗಿರುವ ಸಕ್ರಿಯ ಕಾರ್ಯಕರ್ತರಲ್ಲೆಲ್ಲ ಅತ್ಯಂತ ಚಿಕ್ಕವರು ಮತ್ತು ದುರ್ಬಲರು. ಮಾನ್ ಅಣೆಕಟ್ಟಿನಲ್ಲಿ ನೀರಿನ ಮಟ್ಟ ಏರಿದೊಡನೆ ಮುಳುಗುವ ಮೊದಲನೆ ಹಳ್ಳಿ ಇಲ್ಲಿದೆ. ರಾಮ್ ಕನ್ವರ್ ತನ್ನ ಉಪವಾಸವನ್ನು ಪ್ರಾರಂಭಿಸಿದ ಮೂರು ವಾರದೊಳಗಾಗಿ ತನ್ನ ಶರೀರ ತೂಕದಲ್ಲಿ ೨೦ ಕಿ.ಲೊ ಕಳೆದುಕೊಂಡಿದ್ದಾಳೆ. ಸರ್ದಾರ್ ಸರೋವರ, ಮಾಹೇಶ್ವರ ಮತ್ತು ಇಂದಿರಾ ಸಾಗರದಂಥ ಬೃಹತ್ ಅಣೆಕಟ್ಟುಗಳಿಂದಾಗಿ ಉಚ್ಚಾಟಿತಗೊಂಡ ಲಕ್ಷಾಂತರ ಜನರನ್ನು ಪುನರ್ವಸತಿಗೊಳಿಸುವುದು ಕಾಗದದ ಮೇಲೆ ಮಾತ್ರ ಸಾಧ್ಯ. ಆದರೆ 'ಮಾನ್' ನಂಥ ಅಣೆಕಟ್ಟಿನಿಂದಾಗಿ ಭೂಮಿ ಕಳೆದುಕೊಂಡಂಥ ಸುಮಾರು ೬೦೦೦ ಜನರನ್ನು ಪುನರ್ವಸತಿಗೊಳ್ಳಬೇಕಾದವರೆಂದು ಗುರುತಿಸಲಾಗಿದೆ, ದೊರೆಯಬಹುದಾದ ಭೂಮಿಯನ್ನು ಖರೀದಿಸಿ ಇವರಿಗೆ ಸರ್ಕಾರವು ವಿತರಿಸಬೇಕಿದೆ, ಆದರೆ ಸರ್ಕಾರ ನಿರಾಕರಿಸುತ್ತಿದೆ.

ಸರ್ಕಾರ ಅಲ್ಪ ಪ್ರಮಾಣದ ಹಣವನ್ನು ಪರಿಹಾರವಾಗಿ ಹಂಚುವುದರಲ್ಲಿ ತನ್ನನ್ನು ಬಹುವಾಗಿ ತೊಡಗಿಸಿಕೊಂಡಿದೆ. ಹಣದ ಪರಿಹಾರ ಕೊಡುವಿಕೆ ಕಾನೂನಿಗೆ ವಿರೋಧವಾಗಿ ಮತ್ತು ತನ್ನ ನೀತಿಯನ್ನು ತಾನೆ ಮುರಿದಂತಾಗುತ್ತಿದೆ. ಮಾನ್ ಅಣೆಕಟ್ಟಿನ ಉಚ್ಚಾಟಿತರ ಬೇಡಿಕೆಗಳನ್ನು ತಾನು ಪೂರೈಸಿದಲ್ಲಿ ಇಷ್ಟರಲ್ಲಿಯೆ ನರ್ಮದಾ ಕಣಿವೆಯಲ್ಲಿ ಕಟ್ಟಬೇಕೆಂದಿರುವ ಇತರ ಇಪ್ಪತ್ತೊಂಭತ್ತು ಬೃಹತ್ ಅಣೆಕಟ್ಟುಗಳಿಂದಾಗಿ ದಲಿತರು ಮತ್ತು ಆದಿವಾಸಿಗಳು ಆದಿಯಾಗಿ ಉಚ್ಚಾಟಿಸಲ್ಪಡುವ ಲಕ್ಷಾಂತರ ಜನರಿಗೆ ಒಂದು ಉದಾಹರಣೆಯನ್ನು ಹಾಕಿಕೊಟ್ಟಂತಾಗುತ್ತದೆಂದು ಸರ್ಕಾರವೆ ಬಹಿರಂಗವಾಗಿ ಹೇಳುತ್ತದೆ. ಸಾಮಾಜಿಕ ಮತ್ತು ಪರಿಸರಾಧಾರಿತ ಸಮಸ್ಯೆಗಳನ್ನು ಉದಾಸೀನವಾಗಿ ಬದಿಗಿಟ್ಟು ಈ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ಸರ್ಕಾರವು ಬದ್ಧವಾಗಿದೆ.

ವಿನೋದ್ ಮಂಗತ್, ಚಿತ್ತರೂಪ ಮತ್ತು ರಾಮ್‌ಕನ್ವರ್ ತಮ್ಮ ಉಪವಾಸದಿಂದಾಗಿ ಆರೋಗ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಯಾವಾಗ ಬೇಕಾದರೂ ಅವರ ಮರಣ ಸಂಭವಿಸಬಹುದು, ಆದರೆ ಸರ್ಕಾರದ ಯಾವುದೇ ಅಧಿಕಾರಿ ಅವರನ್ನು ಭೇಟಿ ಮಾಡುವ ಕಾಳಜಿ ವಹಿಸಿಲ್ಲ.

ಕೋಪಾವೇಶದ ಕಣ್ಣೀರು ಹರಿಯುತ್ತಿದೆ, ಹತಾಶೆಯಿದೆ, ಗಾಬರಿಯಿದೆ ಮತ್ತು ನಿಜವಾದ ಭಯವಿದೆ, ಆದರೆ ಇವೆಲ್ಲದರ ಅಡಿಯಲ್ಲಿ ಪರಿಶುಧ್ಧವಾದ ಸ್ಥೈರ್ಯವಿದೆ.

ಅವರಿಗೆ ಏನು ಸಂಭವಿಸುವುದು? ಪ್ರಗತಿಗೆ ತೆತ್ತ ಬೆಲೆ ಎಂಬ ಹಣೆಪಟ್ಟಿಯೊಡನೆ ಅವರು ದಾಖಲೆಯ ಪುಟಗಳಲ್ಲಿ ಸೇರಿಕೊಳ್ಳುವರೆ ಈ ಒಂದು

ಮಾತು ಇಡೀ ವಾದಕ್ಕೆ ಒತ್ತುಕೊಡುತ್ತದೆ. ಅಭಿವೃದ್ಧಿಯ ಪರವಾಗಿರುವ ಮತ್ತು ಅಭಿವೃದ್ಧಿಯ ವಿರೋಧವಾಗಿರುವವರ ಮಧ್ಯದ ವಾದಕ್ಕೆ ಇವೆರಡರಲ್ಲಿ ನೀವು ಅನಿವಾರ್ಯವಾಗಿ ಅಭಿವೃದ್ಧಿಯ ಪರವಾದುದನ್ನೇ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಇನ್ನು ಬೇರೆ ಯಾವುದಿದೆ? ಇದರ ಅರ್ಥ ನರ್ಮದಾ ಉಳಿಸಿ ಆಂದೋಲನದಂತಹ ಚಳುವಳಿಗಳು ಅಪ್ರಸ್ತುತ ಮತ್ತು ವಿದ್ಯುತ್‌ಶಕ್ತಿ ಅಥವಾ ನೀರಾವರಿಗೆ ವಿರೋಧವಾದಂತವು ಎಂದು ಹೇಳಿದಂತೆಯೆ ಸರಿ. ಇದು ಖಂಡಿತವಾಗಿ ಮೂರ್ಖತನದ ಮಾತು.

ಬೃಹತ್ ಅಣೆಕಟ್ಟುಗಳು ಗತಕಾಲಕ್ಕೆ ಸೇರಿದಂತವುವೆಂದು ನರ್ಮದಾ ಉಳಿಸಿ ಆಂದೋಲನ ನಂಬುತ್ತದೆ. ವಿದ್ಯುತ್ ಶಕ್ತಿಯನ್ನು ಉತ್ಪಾದಿಸುವ ಮತ್ತು ನೀರಾವರಿ ವ್ಯವಸ್ಥೆಯ ಜಾಲವನ್ನು ನಿರ್ವಹಿಸುವುದಕ್ಕೆ ಹೆಚ್ಚು ಪ್ರಜಾತಾಂತ್ರಿಕ, ಸ್ಥಳೀಯ, ಆರ್ಥಿಕವಾಗಿ ಲಾಭದಾಯಕವಾದ ಮತ್ತು ಪರಿಸರವನ್ನು ಉಳಿಸುವ ಮಾರ್ಗಗಳಿವೆಯೆಂದು ಅದು ನಂಬುತ್ತದೆ. ಅದು ಹೆಚ್ಚು ಪ್ರಜಾತಂತ್ರವನ್ನು ಬಯಸುತ್ತದೆ ಇದಕ್ಕೆ ಕಡಿಮೆಯಾದಯಾವುದನ್ನೂ ಅದು ಬಯಸುವುದಿಲ್ಲ. ಮಧ್ಯಪ್ರದೇಶದಲ್ಲಿ ಪೋಲೀಸರು ಮತ್ತು ಆಡಳಿತಗಾರರು ಆದಿವಾಸಿ ಹಳ್ಳಿಗಳನ್ನು ಬುಲ್‌ಡೋಜರ್‌ಗಳೊಂದಿಗೆ ಪ್ರವೇಶಿಸಿದರು. ಅವರು ಕೈಪಂಪುಗಳನ್ನು ಮುಚ್ಚಿದರು; ಶಾಲಾಕಟ್ಟಡಗಳನ್ನು ಬೀಳಿಸಿದರು ಮತ್ತು ಮರಗಳನ್ನು ಕಡಿದು ಹಾಕಿದರು. ಜನರು ತಮ್ಮ ಮನೆ ಬಿಟ್ಟು ಹೋಗುವಂತೆ ಬಲಾತ್ಕರಿಸಲು ಇದೆಲ್ಲವನ್ನು ಮಾಡಲಾಯಿತು. ಪ್ರಪಂಚದಾದ್ಯಂತ ಅಹಿಂಸಾತ್ಮಕ ಚಳುವಳಿಗಳನ್ನು ಹತ್ತಿಕ್ಕಲಾಗುತ್ತಿದೆ ಮತ್ತು ಮುರಿಯಲಾಗುತ್ತಿದೆ. ನಾವು ಆ ಅಹಿಂಸಾತ್ಮಕ ಚಳುವಳಿಗಳನ್ನೂ ಗೌರವಿಸದಿದ್ದರೆ ಹಿಂಸಾತ್ಮಕ ಕ್ರಮಗಳತ್ತ ವಾಲುವವರಿಗೆ ನಾವು ನಮ್ಮ ತಪ್ಪಿನಿಂದಾಗಿ ಪ್ರೋತ್ಸಾಹಿಸಿದಂತಾಗುತ್ತದೆ. ಸರ್ಕಾರಗಳು ಮತ್ತು ಮಾಧ್ಯಮಗಳು ತಮ್ಮೆಲ್ಲ ಸಹಾಯವನ್ನು, ಗಮನವನ್ನು, ಹಣವನ್ನು, ಸಂಶೋಧನೆಯನ್ನು, ಸ್ಥಳವನ್ನು, ಕುಟಿಲ ಬುದ್ಧಿಯನ್ನು, ಯುದ್ಧಸಂಬಂಧಿ ಮಾಹಿತಿಗಾಗಿ ಮತ್ತು ಭಯೋತ್ಪಾದಕತೆಯ ಸಿದ್ಧಾಂತಕ್ಕಾಗಿ ವ್ಯಯ ಮಾಡಿದರೆ ಅದರಿಂದುಂಟಾಗುವ ಸಾಮಾಜಿಕ ತಿಳುವಳಿಕೆ ಆತಂಕಕಾರಿಯೂ ಹಾಗೂ ಅಪಾಯಕಾರಿಯೂ ಆಗುತ್ತದೆ. ಯಾವುದೇ ಒಂದು ಸಾರ್ವಜನಿಕ ಅಸಂತೋಷವನ್ನು ವ್ಯಕ್ತಪಡಿಸಬಯಸಿದರೆ ಮತ್ತು ಪರಿಹರಿಸಬೇಕೆಂದು ಹೊರಟರೆ ಅಹಿಂಸೆಗಿಂತ ಹಿಂಸೆ ಹೆಚ್ಚು ಪರಿಣಾಮಕಾರಿಯೆಂದೆನಿಸುತ್ತದೆ. ಶಾಂತಿಯಾಧಾರಿತ ಬದಲಾವಣೆಗೆ ಅವಕಾಶವನ್ನು ಕೊಡದೆ ಇದ್ದಲ್ಲಿ ಹಿಂಸಾತ್ಮಕ ಬದಲಾವಣೆ ಅನಿವಾರ್ಯವಾಗುತ್ತದೆ. ಈಗಾಗಲೆ ಹಿಂಸೆಯು ಗೊತ್ತುಗುರಿಯಿಲ್ಲದ್ದಾಗಿದೆ. ಹೇಯವಾಗಿದೆ ಮತ್ತು ಪೂರ್ವ ಸೂಚನೆಯಿಲ್ಲದ್ದಾಗಿದೆ. ಈಗ ಕಾಶ್ಮೀರದಲ್ಲಿ, ದೇಶದ ಈಶಾನ್ಯ ರಾಜ್ಯಗಳಲ್ಲಿ, ಆಂಧ್ರಪ್ರದೇಶದಲ್ಲಿ ಸಂಭವಿಸುತ್ತಿರುವುದೆಲ್ಲ ಈ ಪ್ರಕ್ರಿಯೆಯ ಭಾಗವೇ.

ಸದ್ಯಕ್ಕಂತೂ ನರ್ಮದಾ ಉಳಿಸಿ ಆಂದೋಲನ ಬೃಹತ್ ಅಣೆಕಟ್ಟುಗಳ ವಿರುದ್ಧ ಹೋರಾಡುತ್ತಿದೆ. ಅಹಿಂಸಾತ್ಮಕ ವಿರೋಧವೆಂಬ ಕಾಣಿಕೆಯನ್ನು ಭಾರತ ಪ್ರಪಂಚಕ್ಕೆ ಕೊಟ್ಟಿದೆ. ಆ ಕಾಣಿಕೆಯ ಉಳಿವಿಗಾಗಿ ನರ್ಮದಾ ಆಂದೋಲನ ಹೋರಾಡುತ್ತಿದೆ. ಆದ್ದರಿಂದ ನೀವು ನರ್ಮದಾ ಉಳಿಸಿ ಆಂದೋಲನವನ್ನು "ಅಹಿಂಸೆ ಉಳಿಸಿ" ಆಂದೋಲನ ಎಂದೂ ಕರೆಯಬಹುದು. ಕಳೆದ ಹಲವಾರು ವರ್ಷಗಳಿಂದ ನಮ್ಮ ಸರ್ಕಾರವು ನರ್ಮದಾ ಕಣಿವೆ ಜನರ ಬಗ್ಗೆ ತಿರಸ್ಕಾರ ಭಾವನೆಯನ್ನಲ್ಲದೆ ಬೇರೆ ಯಾವ ಭಾವನೆಯನ್ನೂ ತೋರಿಸಿಲ್ಲ, ಅವರ ವಾದಕ್ಕೆ ತಿರಸ್ಕಾರ, ಅವರ ಚಳುವಳಿಗೆ ತಿರಸ್ಕಾರ.

೨೧ನೇ ಶತಮಾನದಲ್ಲಿ ಧಾರ್ಮಿಕ ಮೂಲಭೂತವಾದ, ಅಣು ಅಸ್ತ್ರಾಧಾರಿತ ರಾಷ್ಟ್ರವಾದ ಕಾರ್ಪೊರೇಟ್ ಆಧಾರಿತ ವಿಶ್ವೀಕರಣದ ಕಾರಣದಿಂದಾಗಿ ಇಡೀ ಜನಸಂಖ್ಯೆಯ ದಿವಾಳಿತನ. ಇವನ್ನು ಉದಾಸೀನ ಮಾಡುವಂತಿಲ್ಲ ಮಧ್ಯ ಪ್ರದೇಶದ ಸರ್ಕಾರವು ಉಚ್ಚಾಟಿತ ಜನರ ಪುನರ್ವಸತಿಗಾಗಿ ಭೂಮಿ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದೆ. ಆದರೆ ಬೇರೆ ವರದಿಗಳ ಪ್ರಕಾರ ಸರ್ಕಾರವು ಕಾರ್ಪೊರೇಟ್ ವ್ಯವಸಾಯಕ್ಕಾಗಿ ವಿಶಾಲವಾದ ಭೂಮಿಯನ್ನು ಕೊಡಲು ಸಿದ್ಧತೆ ನಡೆಸುತ್ತಿದೆ. ಇದು ಸಂಭವಿಸಿದಲ್ಲಿ ಜನರ ಉಚ್ಚಾಟನೆಯ ಮತ್ತು ದಾರಿದ್ರೀಕರಣದ ಇನ್ನೊಂದು ಸುತ್ತು ಪ್ರಾರಂಭವಾದಂತೆಯೆ. ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿದ್ದ ದಿಗ್ವಿಜಯಸಿಂಗ್‌ರವರು ಧರ್ಮನಿರಪೇಕ್ಷ ವ್ಯಕ್ತಿ ಮತ್ತು ಪರಿಸರ ಪ್ರೇಮಿ ಎಂಬ ಹೆಸರನ್ನು ಪಡೆದಿದ್ದಾರೆ. ಅವರು ನಿಜವಾದ ಜನಪರ ನೀತಿಯನ್ನು ಅನುಸರಿಸಿದರೆ ಇತಿಹಾಸದಲ್ಲಿ ಅವರೊಬ್ಬ ದೂರದರ್ಶಿತ್ವದ ಮತ್ತು ನಿಜ ರಾಜಕೀಯ ಧೈರ್ಯದ ವ್ಯಕ್ತಿಯೆಂದು ದಾಖಲುಗೊಳ್ಳುವರು.

ನಮ್ಮ ಮಟ್ಟಿಗೆ ಹೇಳುವುದಾದರೆ ಸಾರ್ವಜನಿಕ ಹಿತಾಸಕ್ತಿಯ ಬಗ್ಗೆ ಚಿಂತೆಯುಳ್ಳ ನಾಗರೀಕರು, ಶಾಂತಿಗಾಗಿ ಕ್ರಿಯಾಶೀಲರಾದವರು ಶಾಂತಿಗಾಗಿ ಒಂದು ಅವಕಾಶ ಕೊಡಿ ಎಂಬ ಗೀತೆಯನ್ನಷ್ಟೆ ಹೇಳಿದರೆ ಸಾಲದು. ನರ್ಮದಾ ಉಳಿಸಿ ಎಂಬಂಥ ಚಳುವಳಿಗೆ ನಾವು ಬೆಂಬಲ ಕೊಡುವುದರ ಮೂಲಕ ಶಾಂತಿಗೆ ಒಂದು ಅವಕಾಶವನ್ನು ಕೊಟ್ಟಂತಾಗುತ್ತದೆ ಇದೇ ಭಯೋತ್ಪಾದನೆಯ ವಿರುದ್ಧ ನಿಜವಾದ ಯುದ್ಧ.

ಭೂಪಾಲ್‌ಗೆ ಹೋಗಿ, ಟಿನ್‌ಶೆಡ್ ಎಲ್ಲಿ ಎಂದು ಕೇಳಿ.

ವೈಕಿಂಗ್ ೨೦೦೫ರಲ್ಲಿ ಪ್ರಕಟಿಸಿರುವ ಅರುಂಧತಿರಾಯ್‌ರವರ An ordinary Person's Guide to Empire ಎಂಬ ಪುಸ್ತಕದ ಮೊದಲ ಅಧ್ಯಾಯದ ಕನ್ನಡಾನುವಾದ.

ಅನು–ಸು.ಕೌ

* * *

ಸಂವಿಧಾನದ ತಪ್ಪು ಕಲ್ಪನೆ?

– ಡಾ. ಭರತ್ ಜುಂಜುನ್‌ವಾಲ

'ಸಂವಿಧಾನ ವಿಫಲವಾಗಿದೆಯೇ ಅಥವಾ ಸಂವಿಧಾನವನ್ನು ಜಾರಿಗೆ ತರುವ ನಾಯಕರು ವಿಫಲರಾಗಿದ್ದಾರೆಯೇ ಎಂಬ ಚಿಂತನೆಯ ಅಗತ್ಯವಿದೆ' ಎಂದು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಈಚೆಗೆ ಹೇಳಿದ್ದಾರೆ. ಈಗ ನೋಡಿದರೆ ಸಂವಿಧಾನವೇ ವಿಫಲವಾಗಿದೆ ಎಂದು ಕಾಣುತ್ತದೆ. ಏಕೆಂದರೆ ಭ್ರಷ್ಟರಿಗೆ ಅಧಿಕಾರಕ್ಕೆ ಬರಲು ಸಂವಿಧಾನ ಅವಕಾಶ ನೀಡುತ್ತದೆ.

ಸ್ವಹಿತಕ್ಕಿಂತ ದೇಶದ ಹಿತಮೇಲು ಎಂದು ಪ್ರತಿಯೊಬ್ಬ ಪ್ರಜೆಯೂ ಭಾವಿಸುತ್ತಾನೆ ಎಂಬ ಕಲ್ಪನೆಯೊಂದಿಗೆ ಸಂವಿಧಾನದ ರಚನೆಯಾಗಿದೆ. ಆದರೆ ಜನಸಾಮಾನ್ಯರು ಆ ರೀತಿ ಯೋಚನೆ ಮಾಡುವುದಿಲ್ಲ. ಇದು ಜನರ ಅಥವಾ ನಾಯಕರ ದೋಷ ಎನ್ನಲಾಗದು.

ಜನರು ಸರಿಯಾಗಿದ್ದ'ರೆ' ಪ್ರತಿಯೊಂದು ವಿಚಾರಧಾರೆಯೂ ಸರಿ ಎನಿಸುತ್ತದೆ. ಉದಾಹರಣೆಗೆ ಮಾರ್ಕ್ಸ್‌ವಾದವನ್ನೇ ತೆಗೆದುಕೊಳ್ಳಿ. 'ಜನಾಂದೋಲನದ ಸಮಯದಲ್ಲಿ ದುಡಿಯುವ ವರ್ಗದ ಜನರು ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳುತ್ತಾರೆ. ಈ ದುಡಿಯುವ ವರ್ಗದ ನಾಯಕರು ಸ್ವಹಿತಕ್ಕಿಂತ ಸಮಾಜದ ಹಿತ ಮುಖ್ಯ ಎಂದು ಭಾವಿಸುತ್ತಾರೆ. ಕಾರ್ಮಿಕವರ್ಗದ ಜನರ ಆಡಳಿತವನ್ನು ಇಂಥ ನಾಯಕರು ಸ್ಥಾಪಿಸುತ್ತಾರೆ. ಆರಂಭದಲ್ಲಿ ತಮ್ಮ ಜನರ ಮತ್ತು ಆನಂತರ ಇಡೀ ಸಮಾಜದ ಒಳಿತಿಗಾಗಿ ಅವರು ಶ್ರಮಿಸುತ್ತಾರೆ' ಎಂಬ ತತ್ವದ ಆಧಾರದಲ್ಲಿ ಮಾರ್ಕ್ಸ್‌ವಾದ ರೂಪುಗೊಂಡಿದೆ.

ಕಾರ್ಮಿಕವರ್ಗದ ನಾಯಕರು ಈ ರೀತಿಯ ಪ್ರಜ್ಞೆ ಬೆಳೆಸಿಕೊಂಡ'ರೆ' ಮಾರ್ಕ್ಸ್‌ವಾದ ಸರಿಯಾಗಿಯೇ ಕಾರ್ಯನಿರ್ವಹಿಸುತ್ತದೆ. ಅದೇ ಈ ನಾಯಕರು ಪ್ರಜ್ಞೆ ತಪ್ಪಿದ'ರೆ'.....? ಕಾರ್ಮಿಕ ವರ್ಗದವರ ಆಡಳಿತ ಕಮ್ಯೂನಿಸ್ಟ್ ಪಕ್ಷದ ಆಡಳಿತವಾಗಿ ಪರಿಣಮಿಸುತ್ತದೆ. ಚೀನಾ ದೇಶದಲ್ಲಿ ಆಗಿದ್ದೂ ಇದೇ. ಆನಂತರದ ಯುವ ಪೀಳಿಗೆಯಾದರೂ ಕ್ರಾಂತಿಕಾರಿ ವಿಚಾರಧಾರೆ ಹೊಂದಿದ'ರೆ' ಮತ್ತೆ ಮಾರ್ಕ್ಸ್‌ವಾದ ಜೀವತಳೆಯಬಹುದು.

ಮಾರ್ಕ್ಸ್‌ವಾದ ನಾಯಕರಿಂದಾಗಿ ವಿಫಲವಾಯಿತು ಎಂದು ಹೇಳುವುದು ಸರಿಯಲ್ಲ. ಮಾರ್ಕ್ಸ್‌ವಾದವೇ ಸರಿಯಾಗಿಲ್ಲ. ದುಡಿಯುವ ವರ್ಗದ ಜನರು ಕ್ರಾಂತಿಕಾರಿ ಪ್ರಜ್ಞೆ ಬೆಳೆಸಿಕೊಳ್ಳುತ್ತಾರೆ ಎಂಬ ತಪ್ಪು ಕಲ್ಪನೆಯನ್ನು ಆಧರಿಸಿದೆ ಅದು. ಕಮ್ಯೂನಿಸ್ಟ್ ಪಕ್ಷ ಸೇರುವ ವ್ಯಕ್ತಿಗೂ ತನ್ನದೇ ಆದ ಆಸೆ ಆಕಾಂಕ್ಷೆಗಳು ಇರುತ್ತವೆ. ಪಕ್ಷದ ಮೂಲಕ ಈ ಆಸೆಗಳನ್ನು ಈಡೇರಿಸಲು ಅವನು ಬಯಸುತ್ತಾನೆ. ಅದು ಹಣ ಮಾಡುವುದು ಇರಬಹುದು, ಅಧಿಕಾರದ ಲಾಲಸೆ ಇರಬಹುದು

ಅಥವಾ ಜನ ಸೇವೆಯೂ ಇರಬಹುದು.

ಜನಸೇವೆಯೇ ಪರಮ ಉದ್ದೇಶ ಎಂದುಕೊಂಡವರೇ ಪಕ್ಷದ ಸದಸ್ಯರಾದರೆ' ಮಾರ್ಕ್ಸ್‌ವಾದ ಸರಿಯಾಗಿ ಕಾರ್ಯನಿರ್ವಹಿಸಬಹುದು.

ಬೌದ್ಧಧರ್ಮವೂ ಇದೇ ರೀತಿ. ಪ್ರತಿಯೊಬ್ಬನ ಆಂತರ್ಯದಲ್ಲೂ ದುಃಖ ತುಂಬಿರುತ್ತದೆ ಎಂಬ ತತ್ವವನ್ನು ಅದು ಆಧರಿಸಿದೆ. ಈ ದುಃಖದ ಅರಿವು ಆತನಿಗೆ ಆದರೆ ಆತ ಸ್ವವಿಮರ್ಶೆ ಆರಂಭಿಸುತ್ತಾನೆ. ಪ್ರತಿ ಸಂತಸದ ಬೆನ್ನಲ್ಲೇ ದುಃಖ ಇದೆ ಎಂಬ ಸತ್ಯ ಆತನ ಅರಿವಿಗೆ ಬರುತ್ತದೆ. ಆತ ತನ್ನ ಇಂದ್ರಿಯಗಳ ಬಂಧನದಿಂದ ಮುಕ್ತನಾಗುತ್ತಾನೆ. ನಿರ್ವಾಣ ಪಡೆಯುತ್ತಾನೆ.

ಪ್ರತಿಯೊಬ್ಬನೂ ತನ್ನ ಆಂತರ್ಯದ ದುಃಖವನ್ನು ಅರಿತುಕೊಂಡರೆ ಬೌದ್ಧಧರ್ಮ ಸರಿಯಾಗಿ ಕಾರ್ಯನಿರ್ವಹಿಸುತ್ತದೆ. ಅವರು ಆಂತರ್ಯದ ದುಃಖವನ್ನು ಅರಿಯಲು ವಿಫಲರಾದರೆ ಬೌದ್ಧಧರ್ಮವೂ ವಿಫಲವಾಗುತ್ತದೆ.

ಈಗ ಬಂಡವಾಳಶಾಹಿ ವ್ಯವಸ್ಥೆಯನ್ನು ನೋಡೋಣ. ಜನರ ಉದ್ದೇಶ ಗರಿಷ್ಠ ಲಾಭ ಗಳಿಸುವುದು ಎಂಬ ಕಲ್ಪನೆಯ ಆಧಾರದಲ್ಲಿ ಈ ವ್ಯವಸ್ಥೆ ರೂಪುಗೊಂಡಿದೆ. ಸಂಪತ್ತುಗಳಿಸುವುದಕ್ಕಾಗಿ ಜನರು ಕೆಲಸ ಮಡುತ್ತಾರೆ ಮತ್ತು ಆ ಸಂಪತ್ತಿನಿಂದ ಮಾರುಕಟ್ಟೆಯಲ್ಲಿರುವ ವಸ್ತುಗಳನ್ನು ಖರೀದಿಸುತ್ತಾರೆ ಎನ್ನುವುದು ಇದರ ಮೂಲತತ್ವ

ಜನರ ಉದ್ದೇಶ ಲಾಭ ಗಳಿಸುವುದೇ ಆದರೆ ಬಂಡವಾಳಶಾಹಿ ವ್ಯವಸ್ಥೆ ಸರಿ ಎನಿಸಬಹುದು. ಆದರೆ ಎಲ್ಲರ ಉದ್ದೇಶವೂ ಲಾಭ ಗಳಿಸುವುದೇ ಆಗಿರುವುದಿಲ್ಲ. ಕೆಲವರಿಗೆ ಅಧಿಕಾರ ಬೇಕು ಇನ್ನು ಕೆಲವರಿಗೆ ಆಧ್ಯಾತ್ಮಿಕತಯೇ ಮುಖ್ಯ. ಅಧಿಕಾರ ಚಲಾಯಿಸುವ ಜಮೀನ್ದಾರನಿಗೆ ತನ್ನ ಜೀತದಾಳು ಹೆಚ್ಚಿನ ವೇತನಕ್ಕಾಗಿ ನಗರಕ್ಕೆ ವಲಸೆ ಹೋಗುವುದು ಇಷ್ಟವಿರುವುದಿಲ್ಲ. ಈ ರೀತಿ ಆತನನ್ನು ತಡೆಯುವ ಮೂಲಕ ಜಮೀನ್ದಾರ ಮಾರುಕಟ್ಟೆಯ ಕಾರ್ಯವಿಧಾನವನ್ನು ತಡೆಯುತ್ತಾನೆ. ಆ ಜೀತದಾಳು ನಗರಕ್ಕೆ ಹೋಗಿ ಹೆಚ್ಚು ವೇತನ ಪಡೆದಿದ್ದರೆ ಹೆಚ್ಚು ವಸ್ತುಗಳನ್ನು ಮಾರುಕಟ್ಟೆಯಿಂದ ಖರೀದಿಸುತ್ತಿದ್ದ. ಆಗ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತಿತ್ತು. ಆ ವಸ್ತುಗಳ ಪೈಕಿ ಜಮೀನ್ದಾರ ಬೆಳೆದ ವಸ್ತುಗಳೂ ಇರುತ್ತಿದ್ದವು. ಅದಕ್ಕೆ ಸೆಚ್ಚಿನ ಬೆಲೆಯೂ ಬರಬಹುದಿತ್ತು. ಆದರೆ ಜಮೀನ್ದಾರನಿಗೆ ಅಧಿಕಾರವೇ ಮುಖ್ಯ

ಲಾಭಗಳಿಸುವುದೇ ಜನರ ಉದ್ದೇಶ ಅಲ್ಲವಾದರೆ ಬಂಡವಾಳಶಾಹಿ ವ್ಯವಸ್ಥೆ ವಿಫಲವಾಗುತ್ತದೆ. ಲಾಭಗಳಿಸುವ ಅವಕಾಶ ಕಳೆದುಕೊಳ್ಳುವ ಜನರ ಮೂರ್ಖತನದಿಂದಾಗಿ ಈ ವ್ಯವಸ್ಥೆ ವಿಫಲವಾಯಿತೆಂದು ಜನ ಹೇಳಬಹುದು. ಆದರೆ ಬಂಡವಾಳಶಾಹಿ ವ್ಯವಸ್ಥೆಯ ಹರಿಕಾರರು ಎಲ್ಲರ ಉದ್ದೇಶ ಲಾಭಗಳಿಕೆಯೇ ಎಂದು ಹೇಗೆ ನಂಬಿದರು?

ಪ್ರತಿಯೊಂದು ವಿಚಾರಧಾರೆಯೂ ಜನರ ಬಗ್ಗೆ ಒಂದೊಂದು ಕಲ್ಪನೆಯನ್ನು ಆಧರಿಸಿರುತ್ತದೆ. ಆ ಕಲ್ಪನೆ ತಪ್ಪಿದರೆ ಆ ತತ್ವವೂ ತಪ್ಪುತ್ತದೆ.

ಜನರು ಒಂದು ನಿರ್ದಿಷ್ಟ ರೀತಿಯ ಮನಸ್ಸಿನವರಾದರೆ ಒಂದು ನಿರ್ದಿಷ್ಟ ತತ್ವ ಸರಿ ಎನಿಸುತ್ತದೆ. ಚುನಾಯಿತ ನಾಯಕರು ಉತ್ತಮ ಚಾರಿತ್ರ್ಯದವರು ಮತ್ತು ಪ್ರಾಮಾಣಿಕರು ಆಗಿದ್ದರೆ ಸಂವಿಧಾನ ತಪ್ಪಾಗಿದ್ದರೂ ಉತ್ತಮ ಆಡಳಿತ ನಡೆಸುತ್ತಾರೆ. ಎಂದು ಡಾ. ರಾಜೇಂದ್ರ ಪ್ರಸಾದ್ ಹೇಳಿದ ಮಾತುಗಳನ್ನು ರಾಷ್ಟ್ರಪತಿಯವರು ಉಲ್ಲೇಖಿಸಿದರು. ಈ ಮಾತು ಅಕ್ಷರಶಃ ನಿಜ. ದುಡಿಯುವ ವರ್ಗ ರಾಜಕೀಯ ಪ್ರಜ್ಞೆ ಬೆಳೆಸಿಕೊಂಡರೆ ಮಾರ್ಕ್ಸ್‌ವಾದ ಸರಿ; ಜನರಿಗೆ ತಮ್ಮ ಆಂತರ್ಯದ ದುಃಖದ ಅರಿವಾದರೆ ಬೌದ್ಧಧರ್ಮ ಸರಿ; ಲಾಭ ಗಳಿಸುವುದೇ ಜನರ ಉದ್ದೇಶವಾದರೆ ಬಂಡಾಳಶಾಹಿ ವ್ಯವಸ್ಥೆಯೇ ಸರಿ ಎನ್ನುವುದಕ್ಕಿಂತ ಡಾ.ರಾಜೇಂದ್ರ ಪ್ರಸಾದರ ಮಾತುಗಳು ಭಿನ್ನವಾಗೇನೂ ಇಲ್ಲ.

ಜನರು ದೀರ್ಘಾವಧಿಯ ಲಾಭದಬಗ್ಗೆ ಯೋಚಿಸುತ್ತಾರೆ. ಸಮಾಜದ ಒಳಿತು ಬಯಸುತ್ತಾರೆ ಎಂಬ ಕಲ್ಪನೆಯನ್ನು ಎಲ್ಲ ಸಂವಿಧಾನಗಳೂ ಆಧರಿಸಿವೆ. ಸಮಾಜದ ಒಳಿತು ಬಯಸುವ ಅಭ್ಯರ್ಥಿಯನ್ನೇ ಜನರು ಆಯ್ಕೆ ಮಾಡುತ್ತಾರೆ ಎಂದು ಸಂವಿಧಾನ ನಿರೀಕ್ಷಿಸುತ್ತದೆ. ಎಲ್ಲ ಸಂವಿಧಾನಗಳಲ್ಲಿ ಇರುವ ದೋಷವೇ ಇದು.

ನಿಜ ಜೀವನದಲ್ಲಿ, ದೀಘಾವಧಿಯಲ್ಲಿ ತಮಗೆ ಲಾಭವಾಗುವಂಥ ಕೆಲಸಗಳನ್ನೇ ಜನರು ಮಾಡಬೇಕು ಎಂದೇನೂ ಇಲ್ಲ, ಮಾಡುವುದೂ ಇಲ್ಲ. ನಾಲ್ಕೈದು ವರ್ಷಗಳ ನಂತರ ಊರಿಗೆ ಉಪಕಾರ ಮಾಡುವ ಅಭ್ಯರ್ಥಿಗಿಂತ ಚುನಾವಣೆಯ ಹಿಂದಿನ ದಿನ ಸಾರಾಯಿ ಪ್ಯಾಕೆಟ್ ನೀಡುವ ಅಭ್ಯರ್ಥಿಯೇ ಮತದಾರನಿಗೆ ಮುಖ್ಯವಾಗಬಹುದು. ಊರಿಗೆ ಉತ್ತಮ ರಸ್ತೆ ಮಾಡಿಸಬಲ್ಲ ಅಭ್ಯರ್ಥಿಗೆ ಆತ ಮತ ನೀಡದಿರಬಹುದು. ಆಗ ಚಾರಿತ್ರ್ಯಹೀನರು, ಅಪ್ರಾಮಾಣಿಕರು ಆಯ್ಕೆಯಾಗುತ್ತಾರೆ.

ಮತದಾರ ಸಮಾಜದ ಒಳಿತು ಬಯಸಿದರೆ ಉತ್ತಮ ನಾಯಕರು ಆಯ್ಕೆಯಾಗುತ್ತಾರೆ; ಆಗ ನಮ್ಮ ಪ್ರಜಾಪ್ರಭುತ್ವದ ಸಂವಿಧಾನ ಸರಿಯಾಗಿ ಕಾರ್ಯನಿರ್ವಹಿಸಬಹುದಿತ್ತು. ಇವರು ತಮ್ಮ ಒಳತನ್ನೇ ಬಯಸಿದರೆ ಸಂವಿಧಾನ ವಿಫಲವಾಗುತ್ತದೆ.

ಜನರನ್ನಾಗಲೀ, ನಾಯಕರನ್ನಾಗಲೀ ದೂಷಿಸಿ ಲಾಭವಿಲ್ಲ. ಸಂವಿಧಾನಕ್ಕೆ ಜನರ ಬಗ್ಗೆ ತಪ್ಪು ಕಲ್ಪನೆ ಇದೆ. ಜನರು ಸಮಾಜದ ಒಳಿತನ್ನು ಬಯಸುತ್ತಾರೆ ಎಂದು ಸಂವಿಧಾನದ ಕರ್ತರು ಹೇಗೆ ಭಾವಿಸಿದರು? ಚಾರಿತ್ರ್ಯಹೀನ ಮತ್ತು ಅಪ್ರಾಮಾಣಿಕ ವ್ಯಕ್ತಿಗಳು ಅಧಿಕಾರಕ್ಕೆ ಬರಲು ಸಂವಿಧಾನ ಅವಕಾಶ ನೀಡುತ್ತದೆ. ಈ ಜನರ ಆಯ್ಕೆಯನ್ನು ಸಂವಿಧಾನ ಒಪ್ಪುತ್ತದೆ. ಇದು ಏಕೆ ಹೀಗೆ ಎಂದು ರಾಷ್ಟ್ರಪತಿಗಳು ಚಿಂತಿಸಬೇಕು.

(ಸಾಭಾರ–ಪ್ರಜಾ ವಾಣಿ)

* * *

ಗಣರಾಜ್ಯ ಮತ್ತು ಜನತೆ

– ಕುಲದೀಪ ನಯ್ಯರ್

೧೯೫೦ರ ಜನವರಿ ೨೬ರರಂದು ಭಾರತ ಸಂವಿಧಾನವನ್ನು ಅಳವಡಿಸಿಕೊಂಡು ಗಣರಾಜ್ಯವಾಯಿತು; ಈ ಕಾರಣಕ್ಕೇ ನಾವು ಜನವರಿ ೨೬ನ್ನು ಗಣರಾಜ್ಯ ದಿನವಾಗಿ ಆಚರಿಸುತ್ತೇವೆ. ಇದೇನೂ ಸಾಧಾರಣ ಸಾಧನೆಯಲ್ಲ.

ಈ ದಿನಕ್ಕೆ ಮತ್ತೊಂದು ಮಹತ್ವವೂ ಇದೆ; ೧೯೩೦ರ ಜನವರಿ ೨೬ರ ರಂದು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಜವಾಹರಲಾಲ್ ನೆಹರೂ ರಾವಿ ನದಿಯ ದಂಡೆಯ ಮೇಲೆ ಮಾಡಿದ ಘೋಷಣೆ; ಭಾರತ ಒಪ್ಪಿಕೊಳ್ಳುವುದು ಸ್ವತಂತ್ರ ರಾಜ್ಯಾಧಿಕಾರವನ್ನಲ್ಲ, ಸಂಪೂರ್ಣ ಸ್ವರಾಜ್ಯವನ್ನು ಮಾತ್ರ. ಈ ಸಂದರ್ಭಕ್ಕೆ ಗಾಂಧೀಜಿ ಒಂದು ಧ್ವಜವನ್ನು ವಿನ್ಯಾಸಗೊಳಿಸಿದ್ದರು: ಇದೇ ಮುಂದೆ ರಾಷ್ಟ್ರ ಧ್ವಜವಾಯಿತು.

ಆಗಸ್ಟ್ ೧೫ರಂದು ಭಾರತ ಬಿಡುಗಡೆ ಪಡೆದಾಗ, ಇದೆ ಧ್ವಜವನ್ನು ರಾಷ್ಟ್ರಧ್ವಜವೆಂದು ಘೋಷಿಸಲಾಯಿತು. ಸ್ವಾತಂತ್ರ್ಯ ಬಂದಾಗಿನ ಸಂದರ್ಭವನ್ನು ಈಗಿನ ಪರಿಸ್ಥಿತಿಯೊಂದಿಗೆ ಹೋಲಿಸಿದರೆ ಈಗ ಬಡತನ, ಅನಕ್ಷರತೆಗಳು ಹೆಚ್ಚಿವೆ, ಸೂರಿಲ್ಲದವರ ಸಂಖ್ಯೆಯೂ ಹೆಚ್ಚಿದೆ. ಸ್ವಯಂ ಪರಿಪೂರ್ಣತೆಯ ನೀತಿಯಾಗಲೀ, ಉದಾರೀಕರಣವಾಗಲೀ ದೇಶವನ್ನು ಬಡತನದಿಂದ ವಿಮುಕ್ತಿಗೊಳಿಸಲಿಲ್ಲ.

ಕೈಗಾರಿಕೆಗಳು ರೋಗಗ್ರಸ್ತವಾಗಿ, ಉದ್ಯಮಿಗಳು ಶ್ರೀಮಂತರಾಗಿರುವುದು, ಉಳುವವರು ಬಡವರಾಗಿ, ಭೂಮಾಲೀಕರು ಶ್ರೀಮಂತರಾಗಿರುವುದು, ಶ್ರೀಸಾಮಾನ್ಯ ಅಸಹಾಯಕನಾಗಿ, ಆಳುವವರು ಎಲ್ಲ ಅಧಿಕಾರ ಪಡೆದಿರುವುದು ವಿಚಿತ್ರ

ಸಂವಿಧಾನ ತಿದ್ದುಪಡಿಗಳ ಮೂಲಕ ಈ ಎಲ್ಲ ರೋಗಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಬಿಜೆಪಿ ನೇತೃತ್ವದ ಸರ್ಕಾರ ಪ್ರಯತ್ನಿಸುತ್ತಿದೆ. ಬೆಳವಣಿಗೆ ಅಥವಾ ಆರ್ಥಿಕ ಅಭಿವೃದ್ಧಿಯ ಹಾದಿಯಲ್ಲಿ ಸಂವಿಧಾನ ಆಗಾಗ ಅಡ್ಡಿಯಾಗಿದೆ. ನ್ಯಾಯಾಲಯಗಳು ಸಾಮಾನ್ಯವಾಗಿ ಸಂವಿಧಾನವನ್ನು ಪ್ರಗತಿಗಾಮಿಯಾಗಿ ಮತ್ತು ಸಕಾರಾತ್ಮವಾಗಿ ಅರ್ಥೈಸಿವೆ. ಪಟ್ಟಭದ್ರ ಹಿತಾಸಕ್ತಿಗಳ ಪರವಾಗಿದ್ದ ತನ್ನ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯ ಪರಿಷ್ಕರಿಸಿಕೊಂಡಿದೆ.

ಡಾ.ರಾಜೇಂದ್ರ ಪ್ರಸಾದ್ ಅವರು ಸಂವಿಧಾನದ ಭವಿಷ್ಯ ಅದರ ಕಾರ್ಯನಿರ್ವಹಣೆಯನ್ನು ಅವಲಂಬಿಸಿದೆ ಎಂದು ಎಚ್ಚರಿಸಿದ್ದರು. ಆದರೆ ಈ ಎಚ್ಚರಿಕೆಗೆ ಬೆಲೆ ಇಲ್ಲದೆ ಹೋಯಿತು. ಅಧಿಕಾರದಲ್ಲಿದ್ದ ಕೆಲವರು ಸಂವಿಧಾನದ ಅರ್ಥ ಮತ್ತು ಆಶಯಗಳನ್ನು ವಿರೂಪಗೊಳಿಸಿದರು. ಕೆಲವು ನಿರ್ದಿಷ್ಟ

ಹಿತಾಸಕ್ತಿಗಳನ್ನು ಓಲೈಸುವುದಕ್ಕಾಗಿ ಸುಮಾರು ೮೫ ತಿದ್ದುಪಡಿಗಳನ್ನು ತರಲಾಯಿತು. ಸಂವಿಧಾನದ ಘನತೆಗೆ ಸೂಕ್ಷ್ಮ ಸಂವೇದನೆಯೇ ಇಲ್ಲದಂತಾಗಿದೆ. ಉದಾಹರಣೆಗೆ ತುರ್ತುಪರಿಸ್ಥಿತಿ (೧೯೭೫–೭೭) ಮೂಲಭೂತ ಹಕ್ಕುಗಳನ್ನು ತೆಗೆದುಹಾಕುವ ಮೂಲಕ ಉದ್ದೇಶಪೂರ್ವಕವಾಗಿಯೇ ಸಂವಿಧಾನವನ್ನು ಹಳಿತಪ್ಪಿಸಿತು.

ಸಂವಿಧಾನದ ತಿದ್ದುಪಡಿಗೆ ಹೋಗದೆಯೇ ಸಮಸ್ಯೆಗಳನ್ನು ಸರಿಪಡಿಸುವ ಸಲಹೆಗಳು ಬಂದಾಗ ಅವಕ್ಕೆ ಹೆಚ್ಚು ಗಮನವನ್ನು ಕೊಡಲಾಗಲಿಲ್ಲ. ರಾಜ್ಯ ಮತ್ತು ಕೇಂದ್ರಗಳ ವಿಷಯಗಳನ್ನು ಸಂವಿಧಾನ ಸಭೆ ಗುರುತಿಸಿದೆ. ರಾಜ್ಯ ಸರ್ಕಾರಗಳು ಹೆಚ್ಚು ಸ್ವತಂತ್ರ್ಯವಾಗಿ ಮತ್ತು ಸ್ವಾವಲಂಬನೆಯಿಂದ ವ್ಯವಹರಿಸಲು ಸರ್ಕಾರಿಯಾ ಆಯೋಗ ಅನೇಕ ಕ್ರಮಗಳನ್ನು ಸೂಚಿಸಿದೆ. ಯಾವ ಸಂವಿಧಾನ ತಿದ್ದುಪಡಿಗೂ ಈ ಆಯೋಗ ಶಿಫಾರಸ್ಸು ಮಾಡಿಲ್ಲ. ೧೬ ವರ್ಷಗಳು ಕಳೆದರೂ ಎಲ್ಲ ಶಿಫಾರಸ್ಸುಗಳೂ ಜಾರಿಯಾಗದೇ ಹಾಗೆಯೇ ಉಳಿದಿವೆ.

ಸಂವಿಧಾನ ತಿದ್ದುಪಡಿ ಅಗತ್ಯವಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಕೊರತೆಗಳನ್ನು ತುಂಬಿಕೊಳ್ಳಲು ಆಡಳಿತಾತ್ಮಕ ಕ್ರಮಗಳನ್ನು ಕಂಡುಕೊಳ್ಳಬಹುದು.

ಲೋಕಸಭೆ ಐದು ವರ್ಷಗಳ ನಿಶ್ಚಿತ ಕಾಲಾವಧಿಯನ್ನು ಪಡೆದಿರಬೇಕು ಎಂಬುದು ಬಿಜೆಪಿ ತೇಲಿಬಿಟ್ಟಿರುವ ಒಂದು ಸಲಹೆ. ಇದು ಪ್ರಜಾಪ್ರಭುತ್ವದ ಸ್ವರೂಪಕ್ಕೆ ವಿರೋಧವಾಗಿದೆ.

ತುರ್ತುಪರಿಸ್ಥಿತಿ ಮತ್ತು ಅನಂತರದ ಕಾಲಾವಧಿಯಲ್ಲಿ ಇಂದಿರಾ ಗಾಂಧಿಯವರ ವೈಯಕ್ತಿಕ ಮತ್ತು ಭ್ರಷ್ಟ ಆಡಳಿತದ ವಿರುದ್ಧ ಜನತೆಯ ಮನಃಸ್ಥಿತಿಯನ್ನು ಜಯಪ್ರಕಾಶ್ ನಾರಾಯಣ್ ಪ್ರತಿನಿಧಿಸಿದರು. ಆಗಿನ ಜನಸಂಘ ಜೆಪಿಯವರ ಬೆಂಬಲಕ್ಕೆ ನಿಂತಿತು. ಅದೇ ಪಕ್ಷ ಹೊಸದಾಗಿ ಚುನಾವಣೆ ನಡೆಯಬೇಕೆಂಬ ಜನಪ್ರಿಯ ಚಳುವಳಿಯನ್ನು ಹೇಗೆ ತಾನೇ ತಡೆಯುತ್ತದೆ? ವಾಸ್ತವವಾಗಿ ಜೆಪಿಯವರ ಆಗ್ರಹ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿತ್ತು: ಜನ ತಮಗೆ ಬೇಡವೆನ್ನಿಸಿದ ಶಾಸಕರನ್ನು ಮತ್ತು ಸಂಸದರನ್ನು ವಾಪಸ್ಸು ಕರೆದು ಮತ್ತೆ ಚುನಾವಣೆ ಎದುರಿಸುವಂತೆ ಸಂವಿಧಾನದಲ್ಲಿ ಅವಕಾಶ ಬೇಕೆಂದು ಜೆಪಿ ಬಯಸಿದ್ದರು.

ಪಾರ್ಲಿಮೆಂಟ್ ಮತ್ತು ಅಸೆಂಬ್ಲಿಗಳು ಗುರಿಯನ್ನು ತಲುಪುವ ಮಾರ್ಗಗಳೇ ಹೊರತು ಅವೇ ಗುರಿಯಲ್ಲ. ಜನರೇ ಗುರಿ; ಜನ ಸರ್ವತಂತ್ರ ಸ್ವತಂತ್ರರಾಗಿ ಉಳಿಯಬೇಕು. ಇದೇ ಪ್ರಜಾಪ್ರಭುತ್ವದ ಸಾರ.

ಸಂವಿಧಾನದ ನಿರ್ದೇಶಕ ತತ್ವಗಳು ನ್ಯಾಯತೀರ್ಮಾನಗಳಿಂದ ಜಾರಿಗೆ ತರುವಂಥವಲ್ಲ ಎಂಬುದನ್ನು ಐರಿಷ್ ಸಂವಿಧಾನದಂತೆ ನಮ್ಮ ಸಂವಿಧಾನವೂ ಹೇಳುತ್ತದೆ. ಇದು ತೀರ ಸಹಜ. ಯಾಕೆಂದರೆ ಅವುಗಳ ಸ್ವಭಾವಕ್ಕೆ

ಅನುಗುಣವಾಗಿಯೇ ಈ ನಿರ್ದೇಶಕ ತತ್ವಗಳನ್ನು ಶಾಸಕಾಂಗಕ್ಕೆ ಬಿಡಬೇಕು. ಉದಾಹರಣೆಗೆ ಮುಕ್ತ ಮತ್ತು ಕಡ್ಡಾಯ ಶಿಕ್ಷಣವನ್ನು ನ್ಯಾಯಾಜ್ಞೆಯ ಮೂಲಕ ಸಾಧಿಸಲಾಗುವುದಿಲ್ಲ. ಇದಕ್ಕೆ ಶಾಸನಬದ್ಧ ಯೋಜನೆ ಅಗತ್ಯವಿದೆ.

ಇಷ್ಟಾಗಿಯೂ ಸರ್ಕಾರ ಸಂವಿಧಾನವನ್ನು ಪರಿಷ್ಕರಿಸಲು ಬಯಸಿದರೆ, ಇಂಥ ಪ್ರಯತ್ನದ ಸಾಧಕ ಬಾಧಕಗಳ ಬಗ್ಗೆ ಚರ್ಚೆಯಾಗಬೇಕು. ವಾಜಪೇಯಿ ಸರ್ಕಾರ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಚರ್ಚೆನಡೆಸಬೇಕು. ಯಾಕೆಂದರೆ ಮುಖ್ಯಮಂತ್ರಿಗಳು ತಿದ್ದುಪಡಿಯ 'ಮುಖ್ಯಹೊರೆ'ಯನ್ನು ಎದುರಿಸುವವರು. ಈ ರೀತಿ ಯಾದಾಗ ಕೇಂದ್ರದ ಪ್ರಸ್ತಾವನೆಗಳಿಗೆ ರಾಜ್ಯಗಳ ಬೆಂಬಲ ಸಿಗುತ್ತದೆ.

ಮಾಜಿ ರಾಷ್ಟ್ರಪತಿ ಆರ್.ವೆಂಕಟರಾಮನ್ ಅವರ ಬಗ್ಗೆ ಯಾವುದೇ ಅಗೌರವವನ್ನು ತೋರಿಸದೆಯೂ ಹೇಳಬಹುದಾದರೆ, ಅವರನ್ನು ಈ ಆಯೋಗದ ಅಧ್ಯಕ್ಷರನ್ನಾಗಿ ಮಾಡಿರುವುದು ಅನ್ಯಾಯ. ತುರ್ತುಪರಿಸ್ಥಿತಿ ಘೋಷಿಸಿದಾಗ ಅವರು ದಕ್ಷಿಣ ಭಾರತದ ಅತ್ಯುನ್ನತ ನಾಯಕ. ಯಾವುದೇ ವಿಚಾರಣೆಯಿಲ್ಲದೆ ಒಂದು ಲಕ್ಷ ಜನ ಬಂಧನಕ್ಕೀಡಾದರು; ಪತ್ರಿಕೆಗಳ ಬಾಯಿ ಮುಚ್ಚಿಸಲಾಗಿತ್ತು; ಅತ್ಯಂತ ಹೇಯ ಕೃತ್ಯಗಳನ್ನು ನಿರ್ಭೀತಿಯಿಂದ ಮಾಡಲಾಯಿತು. ಸಂವಿಧಾನವನ್ನು ಅಪಹರಿಸಿ ಇಂದಿರಾ ಗಾಂಧೀ ಅಥವಾ ಅವರ ಮಗ ಸಂಜಯ್ ಗಾಂಧೀಯವರು ನಡೆಸಿದ ಈ ಕೃತ್ಯಗಳನ್ನು ಸಾರ್ವಜನಿಕವಾಗಿ ವೆಂಕಟರಾಮನ್ ಅವರು ಪ್ರತಿಭಟಿಸಿದ ದಾಖಲೆಯೇ ಇಲ್ಲ.

ಸಂವಿಧಾನ ಸೃಷ್ಟಿಸಿದ ಸಂಸ್ಥೆಗಳನ್ನು ನಿಭಾಯಿಸುವ ಸಾಮರ್ಥ್ಯ ತಮಗಿದೆ ಎಂಬುದನ್ನು ಭಾರತದ ಜನತೆ ಚುನಾವಣೆಗಳ ಮೂಲಕ ಪ್ರದರ್ಶಿಸಿದ್ದಾರೆ. ಅಧಿಕಾರವನ್ನು ಬಾಚಿಕೊಂಡು ಹೇಗಾದರೂ ಮಾಡಿ ಅದಕ್ಕೆ ಅಂಟಿಕೊಂಡಿರುವುದರಲ್ಲಿಯೇ ತಮ್ಮ ಆಸಕ್ತಿಯನ್ನು ತೋರಿಸುತ್ತಿರುವ ರಾಜಕಾರಣಿಗಳಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಬಿತ್ತುವುದು ಹೇಗೆ ಎಂಬುದೇ ನಿಜವಾದ ಸಮಸ್ಯೆ. ಈ ರಾಜಕಾರಣಿಗಳು ಬದಲಾಗದೆ ಸಂವಿಧಾನಕ್ಕೆ ಎಷ್ಟೇ ತಿದ್ದುಪಡಿ ತಂದರೂ ಪ್ರಯೋಜನವಿಲ್ಲ.

ರಾಷ್ಟ್ರ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಕೇಂದ್ರ ಸಂವಿಧಾನ ತಿದ್ದುಪಡಿಯಂಥ ವ್ಯರ್ಥ ಪ್ರಯತ್ನಗಳಲ್ಲಿ ಮುಳುಗಬಾರದು. ಬಹುಶಃ ಇದು ನಿಜವಾದ ಸಮಸ್ಯೆಗಳಿಂದ ಜನರ ಗಮನವನ್ನು ಸೆಳೆಯುವ ಪ್ರಯತ್ನವಾಗಿದೆ.

ಸಂವಿಧಾನ ಸಭೆಯ ಮೊದಲ ನಿರ್ಣಯವನ್ನು ಜಾರಿಗೆ ತರಲಿ. ದೆಹಲಿಯಲ್ಲಿ ವಿಪರೀತ ಅಧಿಕಾರ ಕೇಂದ್ರೀಕೃತವಾಗಿದೆ ಎಂದು ಜನ ಭಾವಿಸಿದ್ದಾರೆ.

* * *

ಜನಪದ ನಿಲಯದ ಅಂತರಂಗದಲ್ಲಿ..........೨೬

ನೀನಿರುವೆಡೆ ಏನಿದಿಯೊ ಅದನ್ನೇ ಉಪಯೋಗಿಸಿಕೊಂಡು ನಿನಗೆ ಸಾಧ್ಯವಾದುದನ್ನು ಮಾಡು.

-ಥಿಯೋಡಾರ್ ರೂಸ್‌ವೆಲ್ಟ್



ಕೃಷ್ಣರಾಜಪೇಟೆಯಿಂದ ಬಂದಾದ ಮೇಲೆ ನನ್ನ ಮುಂದಿನ ಕೆಲಸದ ಬಗ್ಗೆ ಆಲೋಚನೆ ಪ್ರಾರಂಭವಾಯಿತು. ಯಾವ ಕಾರ್ಯಕ್ರಮವೂ ಇಲ್ಲದೆ ಯಾವ ಕೆಲಸವೂ ಇಲ್ಲದೆ ಕುಳಿತುಕೊಳ್ಳುವುದು ನನ್ನ ಜಾಯಮಾನಕ್ಕೆ ಬಂದ ಸ್ವಭಾವವಲ್ಲ. ನನ್ನ ಪತ್ನಿ ಗಿರಿಜಾ ಸಹ ಸದಾ ಚಟುವಟಿಕೆಯನ್ನು ಬಯಸುವ ಮಹಿಳೆ. ಹೀಗಾಗಿ ಕೃಷ್ಣರಾಜಪೇಟೆಯಲ್ಲಿ ನಾವಿಬ್ಬರು ಹೆಚ್ಚುದಿನ ಇರುವುದು ಅಸಾಧ್ಯವೆನಿಸಲಾರಂಭಿಸಿತು. ಅಲ್ಲದೆ ನನಗೆ ಅದು ಹೊಸ ಸ್ಥಳವೂ ಆಗಿತ್ತು. ತಾಲ್ಲೂಕು ಸ್ಥಳವಾಗಿದ್ದರಿಂದ ಸಾಕಷ್ಟು ದೊಡ್ಡ ಪ್ರಜಾಸಂಖ್ಯೆಯನ್ನು ಹೊಂದಿದ ಊರಾಗಿತ್ತು. ದಿಢೀರನೆ ಯಾವುದಾದರೊಂದು ಕಾರ್ಯಕ್ರಮವನ್ನು ಪ್ರಾರಂಭಿಸೋಣವೆಂದರೆ ನನ್ನ ಬಳಿ ನನ್ನದೆಂಬ ಯಾವ ಹಣವೂ ಇರಲಿಲ್ಲ. ಜೊತೆಗೆ ೬೦ರ ದಶಕದಲ್ಲಿ ಇನ್ನೂ ಎನ್.ಜಿ.ಓ. ಅಥವಾ ಸರ್ಕಾರೇತರ ಸಂಸ್ಥೆಗಳೆಂಬ ಹುಟ್ಟು ಪ್ರಾರಂಭವಾಗಿರಲಿಲ್ಲ. ನನ್ನ ಮನಸ್ಸಿನಲ್ಲಿ ಎಂದೂ ಸರ್ಕಾರಾಧೀನ ಸಂಸ್ಥೆಯ ವಿಚಾರ ಬಂದಿರಲಿಲ್ಲ. ಅಂತಹ ಸಂಸ್ಥೆಗಳು ಹೇಗೆ ಕೆಲಸಮಾಡುತ್ತವೆಂಬುದರ ಕಲ್ಪನೆಯೂ ಇರಲಿಲ್ಲ. ನನಗೆ ಗೊತ್ತಿದುದು ವ್ಯಕ್ತಿಗತ ಹಂತದಲ್ಲಿ ಸ್ವಯಂಸೇವೆ ಇಲ್ಲವೆ ಸಂಸ್ಥೆಯ ಹಂತದಲ್ಲಿ ಸ್ವಯಂಸೇವೆ. ಆದ್ದರಿಂದ ಸರ್ಕಾರದ ಸಹಾಯ ಪಡೆದು ಸಾರ್ವಜನಿಕ ಕಾರ್ಯ ಕೈಗೊಳ್ಳುವ ವಿಚಾರವಂತೂ ದೂರದ ಮಾತು. ಈ ಮನೋಭಾವ ನನ್ನ ಮನಸ್ಸಿನಲ್ಲಿ ಆಳವಾಗಿ ಬೇರೂರಿದ್ದಕ್ಕೆ ಕಾರಣ ಜಯಪ್ರಕಾಶರೊಂದಿಗಿನ ನನ್ನ ನಿಕಟ ಸಂಬಂಧ. ಜಯಪ್ರಕಾಶರು ಸ್ವತಃ ಬಿಹಾರಿನ ಗಯಾ ಜಿಲ್ಲೆಯ ಸೋಕೊದೇವರ ಎಂಬಲ್ಲಿ ಗ್ರಾಮ ನಿರ್ಮಾಣ ಮಂಡಲ ಎಂಬ ಹೆಸರಿನ ಸ್ವಯಂ ಸೇವಾ

ಸಂಸ್ಥೆಯ ಆಶ್ರಯದಲ್ಲಿ ಸರ್ವೋದಯ ಆಶ್ರಮ ನಡೆಸುತ್ತಿದ್ದರು. ಈ ಆಶ್ರಮದಲ್ಲಿ ಭಾರತದ ವಿವಿಧ ರಾಜ್ಯಗಳಿಂದ ಬಂದ ಸರ್ವೋದಯ ಕಾರ್ಯಕರ್ತರಿದ್ದರು. ಕರ್ನಾಟಕದಿಂದ ಶಾಮಸುಂದರ್ ಮತ್ತು ನಾನು ಇದ್ದೆವು. ಜಯಪ್ರಕಾಶರ ಈ ಆಶ್ರಮವು ಸ್ವಾವಲಂಬನೆಯ ಆಧಾರದ ಮೇಲೆ ನಡೆಯುತ್ತಿತ್ತು. ಸರ್ಕಾರದ ಧನಸಹಾಯದ ಮಾತು ಕೇಳಿ ಬರುತ್ತಿರಲಿಲ್ಲ. ಖಾದಿ ಗ್ರಾಮೋದ್ಯೋಗ ಆಯೋಗವು ಕೆಲ ಗ್ರಾಮೋದ್ಯೋಗಗಳನ್ನು ನಡೆಸಲು ಮತ್ತು ಅದಕ್ಕಾಗಿ ಕೆಲ ಕಟ್ಟಡಗಳನ್ನು ಕಟ್ಟಲು ಧನಸಹಾಯ ಮಾಡಿತ್ತು.

ಜಯಪ್ರಕಾಶ್ ನಾರಾಯಣರು ಸಮಾಜವಾದಿ ಪಕ್ಷವನ್ನು ತ್ಯಜಿಸಿ ಸರ್ವೋದಯ ಆಂದೋಲನಕ್ಕೆ ತಮ್ಮ ಜೀವನದಾನವನ್ನು ಕೊಟ್ಟ ಮೇಲೆ ಅವರು ರಾಜ್ಯಶಕ್ತಿ ಮತ್ತು ದಂಡಶಕ್ತಿಗೆ ವಿರುದ್ಧವಾಗಿ ಲೋಕಶಕ್ತಿಯ ಮಾತನ್ನು ಎಲ್ಲೆಡೆಗೆ ಹೇಳುತ್ತಿದ್ದರು. ಪ್ರಧಾನ ಮಂತ್ರಿಯಾಗಿದ್ದ ಜವಾಹರಲಾಲ್ ನೆಹರುರವರ ನೇತೃತ್ವದ ಸರ್ಕಾರದ ಅನೇಕ ಅಭಿವೃದ್ಧಿ ನೀತಿಗಳನ್ನು ಟೀಕಿಸುತ್ತಿದ್ದರು. ಅದೇ ಸುಮಾರಿಗೆ ಸಮುದಾಯ ಅಭಿವೃದ್ಧಿ ಯೋಜನೆ ಪ್ರಾರಂಭವಾಯಿತು. ಈ ಯೋಜನೆಗೆ ಮಂತ್ರಿಯಾಗಿ ಎಸ್.ಕೆ.ಡೇ ಇದ್ದರು. ಜಯಪ್ರಕಾಶರಿಗೆ ಸಮುದಾಯ ಯೋಜನೆಯ ಬಗ್ಗೆ ತುಂಬಾ ಆಸಕ್ತಿ ಇತ್ತು. ಈ ಯೋಜನೆ ನಿಜವಾಗಿಯೂ ಯಶಸ್ಸನ್ನು ಪಡೆಯಬೇಕಾದರೆ ಈ ಯೋಜನೆಯಲ್ಲಿ ಸರ್ಕಾರದ ಧನಸಹಾಯಕ್ಕಿಂತ ಜನರ ಸ್ವಸಹಾಯ ಹೊರಹೊಮ್ಮಬೇಕೆಂದು ಬಯಸುತ್ತಿದ್ದರು. ಈ ಎಲ್ಲ ವಿಚಾರಗಳನ್ನು ಕುರಿತು ಅವರು ಮಾತನಾಡುತ್ತಿದುದನ್ನು ಮತ್ತು ಬರೆಯುತ್ತಿದ್ದ ಲೇಖನಗಳನ್ನು ಹಾಗೂ ಮುಖಂಡರೊಂದಿಗೆ ಮಾಡುತ್ತಿದ್ದ ಪತ್ರ ವ್ಯವಹಾರವನ್ನು ಗಮನಿಸುತ್ತಿದ್ದ ನನಗೆ ಸಹಜವಾಗಿಯೆ ಸರ್ಕಾರಾಧಾರಿತ ಸಂಸ್ಥೆಯ ಕಲ್ಪನೆ ಬರಲು ಸಾಧ್ಯವಿರಲಿಲ್ಲ. ಅದರಿಂದಾಗಿಯೆ ೧೯೬೦ರಲ್ಲಿ ನಾನು ಜನಪದ ಸೇವಾ ಟ್ರಸ್ಟ್ ಪಾರಂಭಿಸಿದಾಗ ಸರ್ಕಾರದ ಸಹಾಯ ಪಡೆಯುವ ಮಾತೆ ಇರಲಿಲ್ಲ. ಅಲ್ಲದೆ ನನ್ನನ್ನು ನಾನು ಟ್ರಸ್ಟಿನಿಂದ ಬೇರೆಯೆಂಬ ಭಾವನೆಯನ್ನು ಬೆಳಸಿಕೊಳ್ಳಲು ಸಾಧ್ಯವಿರಲಿಲ್ಲ. ನನ್ನ ಸ್ವಯಂ ಸೇವೆಯ ವಿಚಾರಕ್ಕೆ ಜನಪದ ಸೇವಾ ಟ್ರಸ್ಟ್‌ನ್ನು ಒಂದು ಸಾಧನವನ್ನಾಗಿ ರೂಪಿಸಿಕೊಳ್ಳುತ್ತಾ ಬಂದೆ.

.... ಮುಂದುವರೆಯುವುದು.

ಜನಪದ ಸೇವಾ ಟ್ರಸ್ಟ್ ಅಂಗಳ



ಜನಪದ ಸೇವಾ ಟ್ರಸ್ಟ್ ಸರ್ವೋದಯ ವಿಚಾರಕ್ಕೆ ಬದ್ಧವಾಗಿರುವ ಸಂಸ್ಥೆ. ೧೯೬೦ ರಲ್ಲಿ ಸ್ಥಾಪಿತಗೊಂಡಾಗಿನಿಂದಲೂ ಸರ್ವೋದಯ ವಿಚಾರಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಟ್ರಸ್ಟ್ ನಡೆಸುತ್ತಾ ಬಂದಿದೆ. ಇದರಲ್ಲಿ ಬಹುಮುಖ್ಯವಾದ ಸಂಗತಿಯೆಂದರೆ ಟ್ರಸ್ಟ್ ಇದುವರೆಗೂ ರಾಜ್ಯಸರ್ಕಾರದಿಂದಾಗಲಿ, ಕೇಂದ್ರಸರ್ಕಾರದಿಂದಾಗಲಿ ಸಹಾಯವನ್ನು ಪಡೆದಿರುವುದಿಲ್ಲ. ತನ್ನ ಚಟುವಟಿಕೆಗಳನ್ನು ನಡೆಸಲು ತನ್ನ ಅಭಿಮಾನಿ ಮಿತ್ರರ ಸಹಾಯವನ್ನೆ ಅವಲಂಬಿಸಿಕೊಂಡು ಬಂದಿದೆ. ಇಂಥ ಅಭಿಮಾನಿ ಸ್ನೇಹಿತರ ಸಹಾಯ ಎಷ್ಟು ದೊಡ್ಡ ಪ್ರಮಾಣದಲ್ಲಿ ದೊರೆಯಿತೆಂದರೆ ಈಗ ಟ್ರಸ್ಟಿನ ಹೆಸರಿನಲ್ಲಿ ನಿಗದಿತ ಠೇವಣಿಗಳು ಮತ್ತು ಬೆಲೆಬಾಳುವ ಸ್ಥಿರ ಆಸ್ತಿಗಳು ನಿರ್ಮಾಣಗೊಂಡಿವೆ. ಇವೆಲ್ಲವು ಸಾರ್ವಜನಿಕ ಕೆಲಸಕ್ಕಾಗಿ ವಿನಿಯೋಗವಾಗುತ್ತಿವೆ.

ಟ್ರಸ್ಟ್‌ನಲ್ಲಿ ಶಿಕ್ಷಣ ಪಡೆದು, ಮಾರ್ಗದರ್ಶನ ಪಡೆದು ಜೀವನದಲ್ಲಿ ಮುಂದೆ ಬಂದಂತಹ ವಿದ್ಯಾರ್ಥಿಗಳು ಅನೇಕರಿದ್ದಾರೆ. ಆದರೆ ದುರಾದೃಷ್ಟವಶದಿಂದ ಭಾಗೀರಥಿ ಎಂಬ ವಿದ್ಯಾರ್ಥಿನಿ ಸ್ವತಂತ್ರವಾಗಿ ಜೀವನ ನಡೆಸಲು ಸಾಧ್ಯವಾಗದೆ ಟ್ರಸ್ಟಿನ ಆಶ್ರಯದಲ್ಲೆ ಕಳೆದ ೩೦ ವರ್ಷಗಳಿಂದ ಉಳಿದುಕೊಂಡಿದ್ದಾಳೆ. ಅವಳು ಸಮಾಜದ ಅತ್ಯಂತ ಹಿಂದುಳಿದ ಸಮೂಹಕ್ಕೆ ಸೇರಿದವಳು. ಬಲಗಾಲು ಮತ್ತು ಎಡಗೈನಲ್ಲಿ ನರದ ದೌರ್ಬಲ್ಯತೆ ಉಳ್ಳವಳು. ಇವಳಿಗೆ ಟ್ರಸ್ಟಿನ ಖಾದಿ ಕಾರ್ಯಕ್ರಮ ವರವಾಗಿ ಪರಿಣಮಿಸಿದೆ. ಅವಳು ತನ್ನ ಎಲ್ಲ ಶಾರೀರಿಕ ದೌರ್ಬಲ್ಯತೆಗಳ ಮಧ್ಯೆಯೂ ದಿನಾಲೂ ಶ್ರದ್ಧೆಯಿಂದ ಅಂಬರಚರಕದ ಮೇಲೆ ನೂಲುತ್ತಾಳೆ. ಪ್ರತಿ ತಿಂಗಳು ಸುಮಾರು ೩೦೦ ರೂಪಾಯಿಗಳಷ್ಟು ದುಡಿಮೆ ಮಾಡುತ್ತಾಳೆ. ಜೊತೆಗೆ ಆವರಣದ ಸ್ವಚ್ಛತೆಯ ಕಾರ್ಯವನ್ನು ಮಾಡುತ್ತಾಳೆ. ಭಾಗೀರಥಿ ಇಲ್ಲದ ಕರುಣಾಗೃಹವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

(ಇದು ೨೦೦೩ ಡಿಸೆಂಬರ್ ಮಾಹೆಗೆ ಸಂಬಂಧಿಸಿದ ವಿಷಯ)

........ಮುಂದುವರಿಯುವುದು

ಬೌದ್ಧಿಕ ಸ್ವಾತಂತ್ರ್ಯ ಒಂದು ಚಿಂತನೆ

-ಡಾ.ಎಸ್.ಎಲ್.ಭೈರಪ್ಪ

ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸ್ವತಂತ್ರವಾಗಿ ಆಲೋಚಿಸುವ ಪ್ರವೃತ್ತಿ ಬೆಳೆಯದ ಸಮಾಜವು ಮುಂದುವರಿಯುವುದಿಲ್ಲ. ಅದು ಪ್ರಜಾಪ್ರಭುತ್ವದ ಸಮಾಜವಾಗುವುದೂ ಇಲ್ಲ. ಪಶ್ಚಿಮ ದೇಶಗಳಲ್ಲಿ ಇಂಥ ವೈಯಕ್ತಿಕ ಬೌದ್ಧಿಕ ಸ್ವಾತಂತ್ರ್ಯವು ಆಳವಾಗಿ ಬೇರು ಬಿಟ್ಟಿರುವ ಕಡೆಗಳಲ್ಲೇ ಪ್ರಜಾಪ್ರಭುತ್ವವು ಯಶಸ್ವಿಯಾಗಿದೆ. ಆ ದೇಶಗಳೇ ಎಲ್ಲ ಕ್ಷೇತ್ರಗಳಲ್ಲಿ ಮುಂದುವರಿದಿವೆ. ಭಿನ್ನಾಭಿಪ್ರಾಯವನ್ನು ತಾಳ್ಮೆಯಿಂದ ಕೇಳುವುದು, ಬೇರೆ ಅಭಿಪ್ರಾಯವನ್ನು ವ್ಯಕ್ತಪಡಿಸುವವರನ್ನೂ ಗೌರವದಿಂದ ಕಾಣುವುದು ಬೌದ್ಧಿಕಪಕ್ವತೆಯ ಮುಖ್ಯ ಲಕ್ಷಣಗಳು. ಭೌತವಿಜ್ಞಾನಗಳಲ್ಲಾದರೆ ನಿಜ ಮತ್ತು ಸುಳ್ಳುಗಳನ್ನು ಪರೀಕ್ಷಿಸಲು ಎಲ್ಲ ದೇಶಗಳ ವಿಜ್ಞಾನಿಗಳೂ ಒಪ್ಪಿರುವ ಕೆಲವು ಪರೀಕ್ಷಾ ವಿಧಾನಗಳಿವೆ. ಮಾನವಿಕ ಜ್ಞಾನಗಳಲ್ಲಿ ಇಂಥ ಪರೀಕ್ಷಾ ವಿಧಾನಗಳ ಬಗೆಗೆ ಒಮ್ಮತ ಕಡಿಮೆ. ಸಾಹಿತ್ಯದಂತಹ ಭಾವ ಪ್ರಧಾನ ಕ್ಷೇತ್ರವನ್ನಂತೂ ತಮಗೆ ಬೇಕಾದಂತೆ ಹಿಗ್ಗಾಮುಗ್ಗಾ ಎಳೆದಾಡಬಹುದೆಂದು ಬೇರೆ ಬೇರೆ ಪಂಥಗಳವರು ಗಟ್ಟಿಯಾಗಿ ನಂಬಿರುವಂತೆ ಕಾಣುತ್ತದೆ.

ಸಲ್ಮಾನ್ ರಶ್ದಿಗೆ ಒದಗಿದಂಥ ಪರಿಸ್ಥಿತಿಯು ಭಾರತದ ಒಬ್ಬ ಲೇಖಕನಿಗೆ ಉಂಟಾದರೆ ಬ್ರಿಟಿಶ್ ಸರ್ಕಾರವು ಆತನಿಗೆ ಮತ್ತು ಆ ಮೂಲಕ ಇಡೀ ರಾಷ್ಟ್ರದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಟ್ಟ ರಕ್ಷಣೆಯನ್ನು ನಮ್ಮ ಸರ್ಕಾರವು ಕೊಡುತ್ತದೆಯೆ? ಪುಸ್ತಕವನ್ನು ಮುಟ್ಟುಗೋಲು ಹಾಕುವ, ಲೇಖಕನನ್ನು ಖಂಡಿಸುವ ಸುಲಭ ಮಾರ್ಗ ಹಿಡಿಯುತ್ತದೆ. ಇನ್ನು ನಾವು ಭೌದ್ಧಿಕವಾಗಿ ಬೆಳೆಯುವುದೆಂತು? ದೊಡ್ಡ ರಾಷ್ಟ್ರವಾಗುವುದೆಂತು?

ರಾಜಕೀಯ ಅನುಕೂಲಕ್ಕೆ ಅಥವಾ ಸಿದ್ಧಾಂತಕ್ಕೆ ತಕ್ಕಂತೆ ಇತಿಹಾಸದ ಘಟನೆಗಳನ್ನು ಸೃಷ್ಟಿಸುವುದು ಮತ್ತು ಈಗಾಗಲೇ ಪ್ರಸಿದ್ಧವಾಗಿರುವ ಘಟನೆಗಳನ್ನು ವ್ಯಾಖ್ಯಾನಿಸುವುದು ಹೊಸತಲ್ಲ. ಹಿಟ್ಲರ್ ಮತ್ತು ಕಮ್ಯುನಿಸ್ಟ್ ರಷ್ಯಾದ ಯಜಮಾನರು ಈ ಕೆಲಸವನ್ನು ದಂಡಿಯಾಗಿ ಮಾಡಿದರು. ನಮ್ಮದು ಪ್ರಜಾಪ್ರಭುತ್ವವೆಂದು ಎಷ್ಟೇ ಹೇಳಿಕೊಂಡರೂ ಆಳುವ ಪ್ರಭುಗಳಲ್ಲಿ ಈ ಪ್ರವೃತ್ತಿ ಇದ್ದೇ ಇದೆ. ಈ ಪ್ರವೃತ್ತಿಯು ನಮ್ಮಲ್ಲಿ ಬುದ್ಧಿಜೀವಿಗಳೆನಿಸಿಕೊಳ್ಳುವವರನ್ನು ಆ ಮೂಲಕ ಸಾಹಿತಿ ಕಲಾವಿದರನ್ನೂ ಆವರಿಸಿಕೊಂಡಿದೆ. ಬದ್ಧ ಸಾಹಿತಿಗಳು ಸಮಕಾಲೀನ ವಸ್ತುವನ್ನು ಕುರಿತು ಬರೆಯುವಾಗ ಜೀವನಾನುಭವದ ವಾಸ್ತವತೆಯನ್ನು ಕಡೆಗಣಿಸಿ ಸೈದ್ಧಾಂತಿಕ ಬದ್ಧತೆಗೆ ಹೆಚ್ಚು ನಿಷ್ಠರಾಗಿರುತ್ತಾರೆ. ಐತಿಹಾಸಿಕ ವಸ್ತುವನ್ನು ನಿರ್ವಹಿಸುವಾಗ

ಇತಿಹಾಸದ ಸತ್ಯವನ್ನು ತಮ್ಮ ಸಿದ್ಧಾಂತದ ವಾಹಕವನ್ನಾಗಿ ಬಳಸುತ್ತಾರೆ. ಇಂಥವರೇ ಶುದ್ಧ ಬೌದ್ಧಿಕ ಸ್ವಾತಂತ್ರ್ಯದ ಕಲ್ಪನೆಯನ್ನು ಧಿಕ್ಕರಿಸಿ ರಾಜಕಾರಣಿಗಳಿಗೆ ಸೈದ್ಧಾಂತಿಕ ಅಸ್ತ್ರವನ್ನು ಒದಗಿಸುತ್ತಾರೆ.

ಇಷ್ಟಾಗಿಯೂ, ಕಾರ್ಮೋಡದ ಅಂಚಿನಲ್ಲಿರುವ ಬೆಳ್ಳಿಯ ರೇಖೆಯಂತೆ ಬೌದ್ಧಿಕ ಸ್ವಾತಂತ್ರ್ಯಕ್ಕೆ ಒಡ್ಡಲಾಗುತ್ತಿರುವ ಅಡೆತಡೆಗಳ ನಿರಾಶಾದಾಯಕ ವಾತಾವರಣದಲ್ಲಿಯೂ, ನೈಜ ಪರಿಪ್ರೇಕ್ಷ್ಯವನ್ನುಳ್ಳ ವ್ಯಕ್ತಿಗಳು, ಅಧಿಕಾರಿಗಳು, ಪತ್ರಿಕೆಗಳು, ವ್ಯವಸ್ಥೆಗಳು, ಅಲ್ಪ ಪ್ರಮಾಣದಲ್ಲಿಯಾದರೂ ಇದ್ದಾರೆ, ಇವೆ. ಇಂಥವರಿಂದಾಗಿ, ಇಂಥವುಗಳಿಂದಾಗಿ ಬೌದ್ಧಿಕ ಸ್ವಾತಂತ್ರ್ಯವು ನಾಡನ್ನು ಸರಿಯಾದ ಹಾದಿಯಲ್ಲಿ ಮುನ್ನಡೆಸುವ ಆಶಾಕಿರಣಗಳು ಕಾಣದೊರೆಯುತ್ತಿರುವುದು ಶುಭಲಕ್ಷಣ. ಅಂಥ ಬೆಳಕು ಇಂದು ಕ್ಷೀಣವಾಗಿರಬಹುದಾದರೂ, ಅದು ಪ್ರಖರವಾಗುವ ದಿನಗಳು ಬರುತ್ತವೆಂಬುದಕ್ಕೆ ಇತಿಹಾಸವು ನಿದರ್ಶನಗಳನ್ನು ಒದಗಿಸುತ್ತ ಬಂದಿದೆ. ಅಂಥವರ, ಅಂಥವುಗಳ ಸಂಖ್ಯೆ ವೃದ್ಧಿಸಲಿ.

–ಮುಗಿಯಿತು

ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದ ವ್ಯಕ್ತಿಮಹನೀಯರು

೧)	ರಾಜೇಂದ್ರ ಪ್ರಸಾದ್	೧೯೫೨	ರಿಂದ	೧೯೫೭
೨)	ರಾಜೇಂದ್ರ ಪ್ರಸಾದ್	೧೯೫೭	ರಿಂದ	೧೯೬೨
೩)	ಎಸ್.ರಾಧಾಕೃಷ್ಣನ್	೧೯೬೨	ರಿಂದ	೧೯೬೭
೪)	ಜಾಕೀರ್ ಹುಸೇನ್	೧೯೬೭	ರಿಂದ	೧೯೬೯
೫)	ವಿ.ವಿ. ಗಿರಿ	೧೯೬೯	ರಿಂದ	೧೯೭೪
೬)	ಫಕ್ರುದ್ದೀನ್ ಎ.ಅಹಮದ್	೧೯೭೪	ರಿಂದ	೧೯೭೭
೭)	ನೀಲಂ ಸಂಜೀವ ರೆಡ್ಡಿ	೧೯೭೭	ರಿಂದ	೧೯೮೨
೮)	ಗಿಯಾನಿ ಜೇಲ್‌ಸಿಂಗ್	೧೯೮೨	ರಿಂದ	೧೯೮೭
೯)	ಆರ್. ವೆಂಕಟರಾಮನ್	೧೯೮೭	ರಿಂದ	೧೯೯೨
೧೦)	ಶಂಕರದಯಾಳ ಶರ್ಮ	೧೯೯೨	ರಿಂದ	೧೯೯೭
೧೧)	ಕೆ.ಆರ್. ನಾರಾಯಣನ್	೧೯೯೭	ರಿಂದ	೨೦೦೨
೧೨)	ಎ.ಪಿ.ಜೆ ಅಬ್ದುಲ್ ಕಲಾಂ	೨೦೦೨	ರಿಂದ	

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂದಿಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು



ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(-ಸಂಪಾದಕರು)

KA-SKMND-470-2003-05
Regd. no. KAR/KAN/2000/3820

ಪುಸ್ತಕ-ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust,® . Melkote. Dist- mandya – 571431
Phone : 08236 – 298754 e-mail : janapada@yahoo.com